
ಕಾಷ

ನಾಟಕ



ಸಿ.ಪಿ.ನಾಗರಾಜ

ಹಾವು ನಾಟಕದ ಬಗ್ಗೆ ಅಭಿಪ್ರಾಯಗಳು

ಒಳ್ಳೆಯ ರುಚಿಯ, ಅತಿರೇಕವಿಲ್ಲದ, ಹೃದಯ ಮುಟ್ಟುವ ನಾಟಕ. **-ಪರ್ವತವಾಣಿ**

ಯಾವ ಆಧುನಿಕತೆಯ ಸೋಗು, ಸೋಂಕುಗಳಿಲ್ಲದೆ ಬರೆದ ಪುಟ್ಟ ನಾಟಕ. ಒಂದು ಸಾಮಾನ್ಯ ಘಟನೆ ನಡೆಯುವಾಗ, ಒಟ್ಟು ಸಮುದಾಯದ ನಾನಾ ಘಟಕಗಳಾದ ವ್ಯಕ್ತಿಗಳು-ನಾನಾ ಸ್ತರದ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ, ಅವರನ್ನು ಯಾವ ಯಾವ ಪ್ರಚೋದನೆಗಳು ಪ್ರೇರಿಸುತ್ತವೆ-ಹೇಗೆ ಈ ಪ್ರತಿಕ್ರಿಯೆಯೇ ನಾಟಕೀಯ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ಲೇಖಕರು ಚೆನ್ನಾಗಿ ಚಿತ್ರಿಸಿದ್ದಾರೆ. **-ಎಚ್.ಕೆ. ರಾಮಚಂದ್ರಮೂರ್ತಿ**

ಹಾವು

(ರಚನೆ : 1980)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, 'ಎ' ಬ್ಲಾಕ್, 5 ನೆಯ ಕ್ರಾಸ್, ಕೃಷ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ರಾಮಚಂದ್ರ---ಕಾಲೇಜು ಅಧ್ಯಾಪಕ

ಕಮಲ---ರಾಮಚಂದ್ರನ ಹೆಂಡತಿ

ಈಶ್ವರ---ಆಚಾರರ ಮನೆಯ ಹುಡುಗ

ನಾಗಣ್ಣಾಚಾರಿ---ಕುಲುಮೆಯ ಕಸುಬಿನವನು

ಬೋರಮ್ಮ---ಒಕ್ಕಲಗಿತ್ತಿ

ತಮಡಪ್ಪ---ಈಶ್ವರ ದೇವಾಲಯದ ಪೂಜಾರಿ

ಮಾಣಿಕ್ಯಂ---ಕೂಲಿಯವನು

ಇಬ್ಬರು ವಿದ್ಯಾರ್ಥಿಗಳು

ಆಹ್ವಾನ ಪತ್ರಿಕೆಯನ್ನು ನೀಡುವವನು.

ಹಾವು

ದೃಶ್ಯ-1

[ಕಾಲೇಜು ಅಧ್ಯಾಪಕ ರಾಮಚಂದ್ರನ ಅಧ್ಯಯನದ ಕೊಠಡಿ. ಆರಾಮ ಕುರ್ಚಿಯೊಂದರಲ್ಲಿ ಓದುತ್ತ ಕುಳಿತಿರುವ ರಾಮಚಂದ್ರ, ಆಗಾಗ್ಗೆ ಕೆಲವು ಅಂಶಗಳನ್ನು ಟಿಪ್ಪಣಿ ಹಾಕಿಕೊಳ್ಳುತ್ತಿದ್ದಾನೆ. ಹೊರಗಡೆ ಬಾಗಿಲು ತಟ್ಟಿದ ಶಬ್ದವಾಗುತ್ತದೆ. ಓದುವುದರಲ್ಲೇ ಮಗ್ನನಾಗಿದ್ದ ರಾಮಚಂದ್ರನಿಗೆ ಅದು ಮೊದಲು ಕೇಳಿಸುವುದಿಲ್ಲ. ಮತ್ತೆ ಬಾಗಿಲು ತಟ್ಟಿದ ಶಬ್ದವಾಗುತ್ತದೆ.]

ರಾಮಚಂದ್ರ : ಕಮಲ... ಕಮಲ... ನೋಡೆ, ಯಾರೋ ಬಾಗಿಲು ತಟ್ತಾಯಿದ್ದಾರೆ?

ಕಮಲ : (ರಂಗದ ಎಡಬದಿಯಿಂದ ಪ್ರವೇಶಿಸುತ್ತಾಳೆ.)
ಏನ್ರಿ?

ರಾಮಚಂದ್ರ : ಯಾರೋ ಬಾಗಿಲು ಬಡಿದಂಗಾಯ್ತು, ನೋಡು.
(ರಂಗದ ಬಲಬದಿಗೆ ಕಮಲ ಹೋಗುವಳು. ನೇಪಥ್ಯದಲ್ಲಿ ಬಾಗಿಲು ತೆರೆದ ಶಬ್ದ ಕೇಳಿ ಬರುತ್ತದೆ. ಕೆಲವು ಕ್ಷಣಗಳ ನಂತರ ಕಮಲ ಹಿಂತಿರುಗುತ್ತಾಳೆ.)

ರಾಮಚಂದ್ರ : ಯಾರೇ ಅವರು?

ಕಮಲ : ಯಾರೋ ನಿಮ್ಮ ಸ್ಟೂಡೆಂಟ್ಸ್ ಅಂತೆ, ಇಬ್ಬರು ಬಂದಿದ್ದಾರೆ.

ರಾಮಚಂದ್ರ : ಏನಂತೆ?

ಕಮಲ : ನನಗೇನ್ ಗೊತ್ತು?

ರಾಮಚಂದ್ರ : ಅವರನ್ನು ಒಳಕ್ಕೆ ಕರಿ.
(ಕಮಲ ಮತ್ತೆ ಬಲಭಾಗದಲ್ಲಿ ಹೋಗಿ, ಅವರನ್ನು ಒಳಕ್ಕೆ ಕರೆದು, ರಂಗದ ಎಡಬದಿಯಿಂದ ನಿರ್ಗಮಿಸುತ್ತಾಳೆ. ಬಹಳ ವಿನಯದಿಂದ ವಿದ್ಯಾರ್ಥಿಗಳಿಬ್ಬರು ಪ್ರವೇಶಿಸುತ್ತಾರೆ. ಇಬ್ಬರ ಕೈಯಲ್ಲೂ ಪುಸ್ತಕಗಳಿವೆ.)

ವಿದ್ಯಾರ್ಥಿಗಳು: ನಮಸ್ಕಾರ ಸಾರ್.

ರಾಮಚಂದ್ರ : ನಮಸ್ಕಾರ, ಬನ್ನಿ, ಕುಂತ್ಕೊಳಿ.

ವಿದ್ಯಾರ್ಥಿಗಳು: (ಸಂಕೋಚದಿಂದ ಕುಳಿತುಕೊಳ್ಳದೆ....)
ಪರವಾಗಿಲ್ಲ ಸಾರ್.

ರಾಮಚಂದ್ರ : ಪರ್ವಾಗಿಲ್ಲ, ಕುಂತ್ಕೊಳ್ರಿ.
(ಅವರಿಬ್ಬರು ಅಲ್ಲಿದ್ದ ಕುರ್ಚಿಗಳ ಮೇಲೆ ಕುಳಿತುಕೊಳ್ಳುತ್ತಾರೆ.)

ರಾಮಚಂದ್ರ : ಏನು ಬಂದ್ರಿ?

ವಿದ್ಯಾರ್ಥಿ-1 : ನಿಮ್ಮನ್ನೆ ನೋಡೋಣ ಅಂತ ಬಂದೊ ಸಾರ್.

ರಾಮಚಂದ್ರ : ಏನು ಸಮಾಚಾರ?

ವಿದ್ಯಾರ್ಥಿ-2 : (ಕೈಯಲ್ಲಿನ ಒಂದು ಪುಸ್ತಕವನ್ನು ಬಿಚ್ಚಿ ತೆಗೆದು ಅದರೊಳಗಿನ ಒಂದು ಪುಟವನ್ನು ರಾಮಚಂದ್ರನ ಮುಂದೆ ತೋರಿಸುತ್ತಾ...)
ಈ ವಚನ ಹೇಳಿಸ್ಕೋಳೋಣ ಅಂತ ಬಂದೊ ಸಾರ್.

ರಾಮಚಂದ್ರ : ಯಾವ ವಚನ?

ವಿದ್ಯಾರ್ಥಿ-1 : ಬಸವಣ್ಣನವರದು ಸಾರ್.

ರಾಮಚಂದ್ರ : (ಅವರು ನೀಡಿದ ಒಂದು ಪುಸ್ತಕವನ್ನು ತೆಗೆದುಕೊಂಡು, ಅದರ ಮೇಲೆ ಕಣ್ಣಾಡಿಸುತ್ತಾ...)
ಇದೇನ್ರಿ? ಇಷ್ಟೊಂದು ಆಸಕ್ತಿ ಈ ವಚನದ ಬಗ್ಗೆ!

ವಿದ್ಯಾರ್ಥಿ-2 : (ತನ್ನ ತಲೆಯ ಹಿಂಬದಿಗೆ ಕೈ ಹಾಕಿ, ಸ್ವಲ್ಪ ಕೆರೆಯುತ್ತಾ...)
ನಾಳೆ ಪರೀಕ್ಷೆಯಿದೆ ಸಾರ್. ಅದರಲ್ಲಿ ಭಾವಾರ್ಥಕ್ಕೆ ಈ ವಚನ ಬಂದಿದೆಯಂತೆ ಸಾರ್.

ರಾಮಚಂದ್ರ : ಯಾರು ಹೇಳ್ದೋರು?

ವಿದ್ಯಾರ್ಥಿ-1 : ಹುಡುಗ್ರೆಲ್ಲಾ ಮಾತಾಡ್ಕೊಳ್ತಿದ್ರು ಸಾರ್.

ವಿದ್ಯಾರ್ಥಿ-2 : ಅದಕ್ಕೆ ಇದನ್ನ ಸ್ವಲ್ಪ ಚೆನ್ನಾಗಿ ತಿಳ್ಕೋಳೋಣ ಅಂತ ಬಂದೊ ಸಾರ್.

ರಾಮಚಂದ್ರ : ಬಹಳ ಸಂತೋಷ. ಅಂತೂ ಈ ಕಾರಣದಿಂದಲಾದ್ರು ನಿಮಗೆ ತಿಳ್ಕೋಬೇಕು ಅನ್ನೊ ಆಸೆ ಹುಟ್ಟಿದೆಯಲ್ಲ. ಒಂದು ಸಾರಿ ನಾನು ಈ ವಚನ ಓದುತ್ತೇನೆ. ನೀವು ನಿಮ್ಮ ಪುಸ್ತಕದಲ್ಲಿ ನೋಡ್ಕೊಳಿ.

(ವಿದ್ಯಾರ್ಥಿಗಳಿಬ್ಬರು ತಮ್ಮಲ್ಲಿದ್ದ ಒಂದು ಪುಸ್ತಕದ ಕಡೆ ದೃಷ್ಟಿ ಹಾಯಿಸುತ್ತಾರೆ. ರಾಮಚಂದ್ರನು ಓದುವಂತೆ ಅಭಿನಯಿಸುತ್ತಾನೆ. ಆಗ ನೇಪಥ್ಯದಲ್ಲಿ ಅತ್ಯಂತ ಸುಶ್ರಾವ್ಯವಾದ ರೀತಿಯಲಿ ಕೆಳಕಂಡ ವಚನವನ್ನು ಹಾಡಬೇಕು. ಹಿನ್ನೆಲೆ ಗಾಯನ ಸುಮಧುರವಾದ ಸಂಗೀತದೊಡನೆ ಹೊರಹೊಮ್ಮುತ್ತಿರಬೇಕು.

ದಯವಿಲ್ಲದ ಧರ್ಮವದೇವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು
ದಯವೇ ಧರ್ಮದ ಮೂಲವಯ್ಯ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.

ವಚನದ ಹಿನ್ನೆಲೆ ಗಾಯನವು ನಿಂತ ಕೂಡಲೆ, ರಾಮಚಂದ್ರ ಮೇಲೆದ್ದು ಮೇಜಿನ ಮೇಲೆ ಕುಳಿತುಕೊಳ್ಳುತ್ತಾ ಬಹಳ ಕಲಾತ್ಮಕವಾದ ರೀತಿಯಲ್ಲಿ ಈ ವಚನದ ವಿಶ್ಲೇಷಣೆಗೆ ತೊಡಗುತ್ತಾನೆ. ಪಾಠ ಮಾಡುವ ಶೈಲಿಯಲ್ಲಿ ವಿಶ್ಲೇಷಣೆ ಮಾಡುವುದರಿಂದ, ಮಧ್ಯೆ ನಿಲ್ಲಿಸಿ ಮಾತನಾಡುವುದು ಮತ್ತು ಕೆಲವು ಪದಗಳು ಪುನರಾವರ್ತನೆಗೊಳ್ಳುವುದು ಕಂಡು ಬರುತ್ತದೆ.)

ರಾಮಚಂದ್ರ : ನೋಡಿ, ಈ ವಚನದಲ್ಲಿ ದಾರ್ಶನಿಕ ದೃಷ್ಟಿಯುಳ್ಳ ಬಸವಣ್ಣನವರು ಅತ್ಯಂತ ಉದಾತ್ತವಾದ ಜೀವನ ತತ್ತ್ವವೊಂದನ್ನು ನಿರೂಪಿಸಿದ್ದಾರೆ. ಈ ಜಗತ್ತಿನಲ್ಲಿ ಧರ್ಮ ನೆಲೆಗೊಳ್ಳಬೇಕಾದ್ರೆ ದಯೆ, ಕರುಣೆ, ಅನುಕಂಪೆ ಅನ್ನೂದು ಸಕಲ ಜೀವಿಗಳ ಅಂತರಂಗದಲ್ಲೂ ಮಿಡೀತಾಯಿರ್ಬೇಕು. ಒಂದು ಜೀವಿ, ಮತ್ತೊಂದು ಜೀವಿಯನ್ನು ತನ್ನಂತೆಯೇ ಭಾವಿಸಿ, ಕರುಣೆಯಿಂದ ಕಾಣ್ಬೇಕೆ ವಿನಹ ಕ್ರೌರ್ಯದಿಂದಲ್ಲ. ಈ ವಚನದಿಂದ ನಾವು ತಿಳಿಯಬೇಕಾದ್ದು ಬಹಳವಿದೆ. ಧರ್ಮದ ಪಥದಲ್ಲಿ ನಡೀಬೇಕಾದ್ರೆ, ನಾವು ಮೊಟ್ಟಮೊದಲು ದಯಾಶೀಲರಾಗಿ ವರ್ತಿಸುವುದನ್ನು ಕಲಿಯಬೇಕು. ಮತ್ತೊಂದು ಜೀವಿಯನ್ನು... ಅಂದ್ರೆ ಅದು ಪ್ರಾಣಿಯೇ ಆಗಿರ್ಲಿ ಅಥವಾ ಮನುಷ್ಯನೇ ಆಗಿರ್ಲಿ ಕಿಂಚಿತ್ತು ಹಿಂಸೆಗೆ ಗುರಿ ಮಾಡಬಾರದು. ಯಾವುದೇ ಕಾರಣದಿಂದಲೂ.... ಅಂದ್ರೆ ದ್ವೇಷ, ಅಸೂಯೆ, ಮಾತ್ಸರ್ಯ

ಅಥವಾ ಭೀತಿಭಾವಗಳಿಗೆ ನಾವು ವಶರಾಗಿ ಅನ್ಯ ಜೀವಿಗಳನ್ನು ಕೊಲ್ಲಬಾರದು. ದಯೆಯೆಂಬುದೇ ಧರ್ಮದ ಅಡಿಗಲ್ಲು. ಪರಿಶುದ್ಧ ಮನಸ್ಸಿನ ಕರುಣೆಯಿಲ್ಲದೆ, ನಾವು ಯಾವ ಧರ್ಮವನ್ನು ಆಚರಿಸಿದರೂ ಏನೂ ಸಾರ್ಥಕವಿಲ್ಲ. ಕೂಡಲಸಂಗಮ ಮೆಚ್ಚುವಂತೆ ನಾವು ಬಾಳಬೇಕಾದ್ರೆ, ಕರುಣೆ ಅನ್ನೋದು ನಮ್ಮ ಬದುಕಿನ ಪ್ರಧಾನ ಅಂಗವಾಗ್ಬೇಕು.... ಅರ್ಥವಾಯ್ತೇನ್ರಿ.

ವಿದ್ಯಾರ್ಥಿಗಳು : (ಅರ್ಥವಾಯಿತೆಂಬಂತೆ ತಲೆಯಲ್ಲಾಡಿಸುತ್ತಾರೆ).

ರಾಮಚಂದ್ರ : ಧರ್ಮದ ಹಿರಿಮೆಯು ಕರುಣೆಯನ್ನೇ ಅವಲಂಬಿಸಿದೆ ಎನ್ನುವ ಮಹಾತತ್ತ್ವವೊಂದನ್ನು ಈ ವಚನದಲ್ಲಿ ಬಸವಣ್ಣನವರು ಸಾರಿದ್ದಾರೆ.

ವಿದ್ಯಾರ್ಥಿ-1 : (ಸ್ವಲ್ಪ ಸಂಕೋಚದಿಂದ)
ಸ್ವಲ್ಪ ನಿಧಾನವಾಗಿ ಹೇಳುದ್ರೆ ಬರ್ಕ್ಕೊಂಡ್‌ಬಿಡ್ತೀವಿ, ಸಾರ್.

ರಾಮಚಂದ್ರ : (ನಗುತ್ತಾ)
ಹಾಗಾದ್ರೆ ನಾನ್ಹೇಳುದ್ದು ನಿಮಗೆ ಅರ್ಥವಾಗ್ಲಿಲ್ಲ.

ವಿದ್ಯಾರ್ಥಿ-1 : ಚೆನ್ನಾಗಿ ಅರ್ಥವಾಯ್ತು ಸಾರ್. ಆದ್ರೆ ನನಗೆ ಮರವು ಜಾಸ್ತಿ ಸಾರ್.

ರಾಮಚಂದ್ರ : ಇದರಲ್ಲಿ ಮರೆತು ಹೋಗುವಂಥಾದ್ದು ಏನು ಇದೇರಿ? ವಚನದಲ್ಲೇ ಎಲ್ಲಾ ಅಂಶಗಳು ಇವೆಯಲ್ಲಾ!

ವಿದ್ಯಾರ್ಥಿ-2 : ಇನ್ನೊಂದು ಸಾರಿ ಸ್ವಲ್ಪ ಹೇಳ್ಬಿಡಿ ಸಾರ್....
(ಅವರ ಕೋರಿಕೆಯ ಮೇರೆಗೆ ರಾಮಚಂದ್ರನು ಮತ್ತೊಮ್ಮೆ ಹೇಳತೊಡಗುತ್ತಾನೆ. ವಚನವನ್ನು ಆತ ವರ್ಣಿಸುತ್ತಿರುವ ಹಾವ ಭಾವಗಳು ಮಾತ್ರ ಪ್ರೇಕ್ಷರಿಗೆ ಕಾಣುತ್ತಿರಬೇಕು ; ಅವನ ಮಾತುಗಳು ಪ್ರೇಕ್ಷಕರಿಗೆ ಕೇಳಬಾರದು. ನೇಪಥ್ಯದಲ್ಲಿ ಬಲು ಮೆಲುದನಿಯಲ್ಲಿ ವಚನವನ್ನು ಮತ್ತೊಮ್ಮೆ ಇಂಪಾಗಿ ಹಾಡುತ್ತಿರಬೇಕು. ವಚನದ ಹಾಡುವಿಕೆ ನಿಲ್ಲುತ್ತಿದ್ದಂತೆಯೇ ರಾಮಚಂದ್ರನ ವಿಶ್ಲೇಷಣೆಯು ನಿಲ್ಲಬೇಕು. ವಿದ್ಯಾರ್ಥಿಗಳಿಬ್ಬರ ಮುಖದಲ್ಲೂ ವಚನವನ್ನು ಅರ್ಥಮಾಡಿಕೊಂಡ ತೃಪ್ತಿಯ ಭಾವ ಎದ್ದು ಕಾಣುವಂತಿರಬೇಕು.)

ವಿದ್ಯಾರ್ಥಿಗಳಿಬ್ಬರು: (ಎದ್ದು ನಿಂತು)
ತುಂಬಾ ಸಹಾಯ ಮಾಡುದ್ರಿ ಸಾರ್. ಬರ್ತೀವಿ ಸಾರ್, ನಮಸ್ಕಾರ.

ರಾಮಚಂದ್ರ : ನಮಸ್ಕಾರ, ಹೋಗ್ಬನ್ನಿ.
(ವಿದ್ಯಾರ್ಥಿಗಳು ರಂಗದಿಂದ ನಿರ್ಗಮಿಸುತ್ತಿದ್ದಂತೆಯೇ, ಕಮಲ ಪ್ರವೇಶಿಸುತ್ತಾಳೆ.)

ಕಮಲ : (ಮುಗುಳ್ನಗುತ್ತಾ)
ಏನ್ರಿ, ಬಹಳ ಚೆನ್ನಾಗಿ ಕೊರುದ್ರಿ.

ರಾಮಚಂದ್ರ : ಅರ್ಥವಾಗುವಂತೆ ಹೇಳ್ಲಿಲ್ವೇನೆ?
(ಅಷ್ಟರಲ್ಲಿ ಹೊರಗಡೆಯಿಂದ ಮತ್ತೆ ಸಾರ್.... ಸಾರ್.... ಎಂಬ ಕೂಗು)

ರಾಮಚಂದ್ರ : ಯಾರದು ನೋಡೆ ?

ಕಮಲ : (ಬಲಬದಿಯಿಂದ ನಿರ್ಗಮಿಸಿ, ಕ್ಷಣಕಾಲದ ನಂತರ ಬಂದು)
ಇನ್‌ವಿಟೇಶನ್ ಕೊಡೋಕೆ ಅಂತ ಬಂದಿದ್ದಾರಂತೆ.

ರಾಮಚಂದ್ರ : ಹೌದಾ, ಒಳಕ್ಕೆ ಬರಹೇಳು.

ಕಮಲ : ಕರೆದಾಯ್ತು, ಆಗ್ಲೆ.
(ಎನ್ನುತ್ತಾ ಅಲ್ಲಿಂದ ನಿರ್ಗಮಿಸುತ್ತಾಳೆ. ಆಹ್ವಾನ ಪತ್ರಿಕೆಗಳನ್ನು ಹಿಡಿದಿರುವ ವ್ಯಕ್ತಿಯೊಬ್ಬ ಬಹು ಸಂಕೋಚದಿಂದ ಒಳಗಡೆಗೆ ಕಾಲಿಡುತ್ತಿದ್ದಾನೆ.)

ರಾಮಚಂದ್ರ : (ಅವನನ್ನು ನೋಡಿ)
ಓಹೋ ! ನೀವಾ...ಬನ್ನಿ ಒಳಕ್ಕೆ.

ವ್ಯಕ್ತಿ : ನಮಸ್ಕಾರ ಸಾರ್.

ರಾಮಚಂದ್ರ : ನಮಸ್ಕಾರ ಬನ್ನಿ. ಏನು ಇಷ್ಟು ದೂರ?

ವ್ಯಕ್ತಿ : (ಆಹ್ವಾನ ಪತ್ರಿಕೆಗಳ ಕಟ್ಟಿನಿಂದ, ಒಂದು ಆಹ್ವಾನ ಪತ್ರಿಕೆಯನ್ನು ಹೊರತೆಗೆದು)

ಇನ್‌ವಿಟೇಶನ್ ಕೊಟ್ಟು ಹೋಗೋಣ ಅಂತ ಬಂದೆ ಸಾರ್.
(ಆಹ್ವಾನ ಪತ್ರಿಕೆಯನ್ನು ರಾಮಚಂದ್ರನಿಗೆ ನೀಡುತ್ತಾನೆ.)

ರಾಮಚಂದ್ರ : (ಆಹ್ವಾನ ಪತ್ರಿಕೆಯ ಕಡೆಗೆ ಕಣ್ಣಾಡಿಸುತ್ತಾ)

ಸಮಾರಂಭವನ್ನು ಏನು ಸರಿಯಾದ ವೇಳೆಗೆ ಪ್ರಾರಂಭ ಮಾಡ್ತೀರೋ ಅಥವಾ ಇಂಡಿಯನ್ ಸ್ಟ್ಯಾಂಡರ್ಡ್ ಟೈಮೋ?

ವ್ಯಕ್ತಿ : ಇಲ್ಲ ಸಾರ್. ನಮ್ಮ ಶಾಲೇನಲ್ಲಿ ಯಾವತ್ತು ನಾವು ತಡಮಾಡೋದೆ ಇಲ್ಲ. ಗೆಸ್ಟ್ ಬಂದ ತಕ್ಷಣ ಪ್ರಾರಂಭ ಮಾಡ್ತೀವಿ.

ರಾಮಚಂದ್ರ : (ಬಂದ ವ್ಯಕ್ತಿ ನಿಂತುಕೊಂಡೇ ಮಾತಾಡುತ್ತಿರುವುದನ್ನು ಗಮನಿಸಿ)
ಕುಂತ್ಕೊಳ್ಳಿ.

ವ್ಯಕ್ತಿ : ಪರ್ವಾಗಿಲ್ಲ ಸಾರ್, ಬರ್ತೀನಿ. ಇನ್ನು ಏನೇನೋ ಕೆಲಸಗಳಿವೆ. ನಮಸ್ಕಾರ, ಸಾರ್.

(ಅನ್ನುತ್ತಾ ಹೊರಡುತ್ತಾನೆ.)

ರಾಮಚಂದ್ರ : ನಮಸ್ಕಾರ.
(ಪ್ರತಿಯಾಗಿ ವಂದಿಸುತ್ತಾನೆ. ಬಂದಿದ್ದ ವ್ಯಕ್ತಿ ಅತ್ತ ನಿರ್ಗಮಿಸುತ್ತಿದ್ದಂತೆಯೇ, ಇತ್ತ ಕಮಲ ಪ್ರವೇಶಿಸುತ್ತಾಳೆ. ರಾಮಚಂದ್ರನ ಬಳಿಗೆ ಬಂದು, ಅವನು ಹಿಡಿದಿದ್ದ ಆಹ್ವಾನ ಪತ್ರಿಕೆಯನ್ನು ಎಳೆದುಕೊಳ್ಳುತ್ತಾ)

ಕಮಲ : ಯಾವತ್ರಿ ಭಾಷಣ ?

ರಾಮಚಂದ್ರ : ಕೈಯಲ್ಲಿ ಇನ್‌ವಿಟೇಶನ್ ಇಟ್ಕೊಂಡು ನನ್ನ ಕೇಳ್ತೀಯಲ್ಲೆ? ನೋಡೆ ಅಲ್ಲೆ.

ಕಮಲ : (ಆಹ್ವಾನ ಪತ್ರಿಕೆಯತ್ತ ಕಣ್ಣಾಡಿಸುತ್ತಾ, ಜೋರಾಗಿ ಓದುತ್ತಾಳೆ)
ಜೆ.ಪಿ. ವಿಚಾರ ಸಂಕಿರಣ.
ಸ್ಥಳ : ಸರ್ಕಾರಿ ಪ್ರೌಢಶಾಲೆಯ ಆವರಣ.
ಕಾಲ : ಬುಧವಾರ ಮಧ್ಯಾಹ್ನ 3-30 ಘಂಟೆ.
ಓಹೋ.... ಹಾಗಾದ್ರೆ ಇನ್ನೆರಡು ದಿನ ನನಗೆ ಬಂತು ಗ್ರಾಚಾರ!

ರಾಮಚಂದ್ರ : ಯಾಕೆ?

ಕಮಲ : ನಿಮ್ಮ ಭಾಷಣ ಅಂದ್ಮೇಲೆ ಕೇಳ್ಬೇಕೆ! ಅದಕ್ಕೆ ಸಿದ್ಧತೆ...ಟಿಪ್ಪಣಿ...ಅದರ ಜತೆಗೆ ನನ್ನ ಮುಂದೆ ರೀಹರ್ಸಲ್ ಬೇರೆ ನಡೆಯುತ್ತೆ!

ರಾಮಚಂದ್ರ : (ಮೇಜಿನ ಮೇಲಿದ್ದ ಪುಸ್ತಕಗಳ ನಡುವೆ ಏನನ್ನೋ ಹುಡುಕುತ್ತಾ)

ಈಗಾಗ್ಲೆ ಫಸ್ಟ್ ಕ್ಲಾಸ್ ಪಾಯಿಂಟ್ಸ್ ಹಾಕಿಟ್ಟಿದ್ದೇನೆ ಕಣೆ. ನೀನು ಹೇಳಿದ್ದು ಒಳ್ಳೇದೆ ಆಯ್ತು. ಒಂದೆರಡು ಪಾಯಿಂಟ್ಸ್ ಹೇಳ್ತೀನಿ. ನಿನ್ನ ಅಭಿಪ್ರಾಯ ಹೇಳು, ನೋಡೋಣ.

ಕಮಲ : (ಅಲ್ಲಿಂದ ದೂರ ಸರಿಯುತ್ತಾ)

ನನಗೆ ಬಿಡುವಿಲ್ರಿ ಈಗ.

ರಾಮಚಂದ್ರ : ಒಂದೈದು ನಿಮಿಷ.... ಎರಡೇ ಎರಡು ಪಾಯಿಂಟ್ಸು ಕೇಳೆ.
(ಎನ್ನುತ್ತಾ ಈಗಾಗಲೇ ಸಿದ್ಧಪಡಿಸಿದ್ದ ಹಾಳೆಗಳನ್ನು ತೆಗೆಯುತ್ತಾನೆ)

ಕಮಲ : (ಹತ್ತಿರ ಬರುತ್ತಾ)
ಅದೇನು ಬೇಗ ಹೇಳಿ.

ರಾಮಚಂದ್ರ : ನಾನು ಆ ದಿನ ಮಾತಾಡೋ ವಿಷಯ ಯಾವುದು ಗೊತ್ತ?

ಕಮಲ : ನನಗೇನ್ರಿ ಗೊತ್ತು?

ರಾಮಚಂದ್ರ : ಇನ್‌ವಿಟೇಶನ್ ನೋಡೆ.

ಕಮಲ : (ಜೋರಾಗಿ ಓದುತ್ತಾಳೆ)

ವಿಷಯ : ಜೆ.ಪಿ. ಅವರ ಸಮಗ್ರ ಕ್ರಾಂತಿ.
ಮುಖ್ಯ ಭಾಷಣಕಾರರು : ಶ್ರೀ ರಾಮಚಂದ್ರ ಎಂ.ಎ. ಅವರು.

ರಾಮಚಂದ್ರ : (ಹೆಮ್ಮೆಯಿಂದ)
ವಿಷಯ ಹೇಗಿದೆಯೇ?

ಕಮಲ : ಬಹಳ ಗಂಭೀರವಾಗಿದೆ...ಇನ್ನು ಪ್ರಾರಂಭ ಮಾಡಿ ನಿಮ್ಮ ಭಾಷಣ..
(ವೈಯಾರದಿಂದ ಬಾಗುತ್ತಾ)

ಸಭಿಕರಾದ ನಾವು ಸಿದ್ಧರಾಗಿದ್ದೇವೆ.

ರಾಮಚಂದ್ರ : (ಭಾಷಣ ಮಾಡುವ ಗಂಭೀರ ಶೈಲಿಯಲ್ಲಿ ಮತ್ತು ಎತ್ತರದ ಧ್ವನಿಯಲ್ಲಿ ಮಾತನಾಡಲಾರಂಭಿಸುತ್ತಾನೆ.)

ಬಡತನವೆಂಬ ಭೀಕರ ಸಮಸ್ಯೆ ಇಂದು ನಮ್ಮ ಭರತಖಂಡವನ್ನು ಕಿತ್ತು ತಿನ್ನುತ್ತಿದೆ. ಇದಕ್ಕೆ ಮೂಲ ಕಾರಣವೇನು?.... ಈ ದೇಶದ ರಾಜಕಾರಣಿಗಳ ಭ್ರಷ್ಟಾಚಾರ; ಅಧಿಕಾರಿಗಳ ಲಂಚಕೋರತನ; ವ್ಯಾಪಾರಸ್ಥರ ಕಾಳಸಂತೆಕೋರತನ. ಇಂಥಾ ಅನ್ಯಾಯಗಳ ವಿರುದ್ಧ ಭಾರತೀಯರಾದ ನಾವು ಸಿಡಿದೇಳುವ ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಳ್ಳಬೇಕು. ಕೆಟ್ಟದ್ದನ್ನು ಕೊಚ್ಚಿ ನಾಶ ಮಾಡುವ ಕೆಚ್ಚು ನಮ್ಮಲ್ಲಿ ಮೂಡಿಬರಬೇಕು. ಆಗ ಮಾತ್ರ ಈ ದೇಶ...

(ಎಂದು ಮಾತನ್ನು ಮುಂದುವರಿಸುತ್ತಿದ್ದಂತೆಯೇ ತೆರೆಯ ಮರೆಯಿಂದ "ಹೋ.... ಹೋ.... ನುಗ್ಗಿ ಬಿಡ್ತು.... ನುಗ್ತು.... ಅಯ್ಯೋ.... ಅಯ್ಯೋ.... ಅಲ್ಲಿಗೆ ನುಗ್ತು".... ಎಂಬ ಧ್ವನಿಗಳು ಕೇಳಿ ಬರುತ್ತವೆ. ಈ ಶಬ್ದದಿಂದ ಗಾಬರಿಗೊಂಡ ರಾಮಚಂದ್ರ....)

ಅದೇನೆ ಗಲಾಟೆ?

ಕಮಲ : ಗೊತ್ತಿಲ್ರಿ.
(ಎನ್ನುತ್ತಾ ಬಲಗಡೆಯಿಂದ ನಿರ್ಗಮಿಸಿ, ಕೆಲವು ಕ್ಷಣಗಳ ನಂತರ ಹಿಂತಿರುಗುತ್ತಾಳೆ.)
ಆ ನೆಲ್ಬಾವಿ ಹತ್ತಿರ ಜನ ಸೇರಿದ್ದಾರೆ. ಏನನ್ನೋ ಬಗ್ಗಿ ಬಗ್ಗಿ ನೋಡ್ತಿದ್ದಾರೆ.
(ಮತ್ತೆ ಗದ್ದಲ.... ಹೊರಗೆ ಹೋಗಿ ಕೆಲವು ನಿಮಿಷಗಳ ನಂತರ ಬರುತ್ತಾಳೆ)

ಕಮಲ : ಬಾವಿ ಹತ್ತಿರ ಹಾವು ಸೇರ್ಕ್ಕೊಂಡಿದೆಯಂತೆ ಕಣ್ರಿ.

ರಾಮಚಂದ್ರ : ಎಂಥಾ ಹಾವೆ?

ಕಮಲ : ನನಗೇನು ಗೊತ್ತು? ನಾನು ಬಾವಿ ಹತ್ತಿರಕ್ಕೆ ಹೋಗಲಿಲ್ಲ. ಅಲ್ಲಿ ಈಶ್ವರ ನಿಂತಿದ್ದ. ಅವನು ಹಾಗಂತ ಹೇಳ್ದ.

ರಾಮಚಂದ್ರ : ಅವನನ್ನೇ ಕರಿ. ಅದೇನು ಕೇಳೋಣ.

(ಕಮಲ ಬಲಬದಿಯಿಂದ ನಿರ್ಗಮಿಸುತ್ತಾಳೆ. ಈಶ್ವರ.... ಈಶ್ವರ.... ಎಂದು ಅವಳು ಕರೆಯುತ್ತಿರುವುದು ನೇಪಥ್ಯದಿಂದ ಕೇಳಿ ಬರುತ್ತದೆ. ಮತ್ತೆ ಹಿಂತಿರುಗಿ ಬರುತ್ತಾಳೆ. ಈಕೆ ಬಂದ ಒಂದೆರಡು ಕ್ಷಣಗಳ ನಂತರ ಈಶ್ವರ ಬಲಬದಿಯಿಂದ ರಂಗವನ್ನು ಪ್ರವೇಶಿಸುತ್ತಾನೆ.)

ಈಶ್ವರ : ಏನ್ರಕ್ಕಾ ಕೂಗುದ್ರಾ?

ಕಮಲ : ಬಾ ಈಶ್ವರ, ನಾನೇ ಕರೆದೆ. ಏನದು ಸದ್ದು?

ಈಶ್ವರ : ನೆಲ್ಬಾವಿ ಒಳಕ್ಕೆ ಹಾವು ಬಿದ್ಬುಟ್ಟಿತ್ತು ಕಣಕ್ಕ.

ರಾಮಚಂದ್ರ : (ಸ್ವಲ್ಪ ಗಾಬರಿಯಿಂದ)

ಎಂಥಾ ಹಾವು?

ಕಮಲ : ಈಗೇನಾಯ್ತು?

ಈಶ್ವರ : ಅಯ್ಯೋ! ಅದ್ನೇನಂತ ಕೇಳ್ತೀರಿ!! ಲಪ್ಪ! ಲಪ್ಪಾ!! ಎಂಥಾ ಹಾವು ಅಂತೀರಾ? ನಾನು ಹುಟ್ಟಿದ್ ತಾವಿಂದ್ಲು ಕಂಡಿರ್ಲಿಲ್ಲ.

ರಾಮಚಂದ್ರ : ಈಗ ಕಂಡೆ ತಾನೆ. ಅಲ್ಲ ಕಣಯ್ಯ, ಹಾವು ಏನಾಯ್ತು ಅಂತ ಕೇಳುದ್ರೆ, ವರ್ಣನೆ ಮಾಡೋಕೆ ಶುರು ಮಾಡ್ಬಿಟ್ಟೆ?

ಈಶ್ವರ : ಅದೆಂಗೆ ಬಾವಿ ಒಳಗೆ ಬುಸ್ಗುಡ್ತಾ ಮೊರೀತಿತ್ತು ಅನ್ನೂದ ನೀವು ಕೇಳಿದ್ರೆ.... ಸೆಡೆಯ ಅತ್ತಗೆ ಇತ್ತಗೆ ಆಡ್ಸುತಾ ಇದ್ದುದ್ದ ನೀವು ನೋಡಿದ್ರೆ, ಗ್ಯಾನವೇ ತಪ್ಪೋಯ್ತಿತ್ತು ಸಾ ನಿಮ್ಗೆ.

ಕಮಲ : (ಅಲ್ಲಿ ನಡೆದಿದ್ದನ್ನು ತಿಳಿದುಕೊಳ್ಳುವ ಕುತೂಹಲದಿಂದ)
ನೆಲ್ಬಾವಿ ಒಳಕ್ಕೆ ಹೇಗೆ ಬೀಳ್ತು? ಯಾವಾಗ ಬೀಳ್ತು?

ಈಶ್ವರ : ನಮ್ಮ ಮನೇ ಪಕ್ಕ ಅತ್ತಾಗೆ ದೊಡ್ಡದೊಂದು ಬೇಲಿ ಇಲ್ವೇನಕ್ಕ, ಅಲ್ಲಿಂದ್ಲೇ ಬಂದಿರ್ಬೇಕು. ಸಕನೆ ದಿನದಿಂದ ಅಲ್ಲೊಂದು ದೊಡ್ಡ ಹುತ್ತ ಸರಿಯಾಗಿ ಒಂದು ಆಳೆತ್ತರ ಅದೆ. ಇವತ್ತು ಈ ಹಾಳಾದ ಹಾವು ಅದೆಲ್ಲಿಂದ ಬತ್ತೋ ಏನೋ?... ಬೆಳಗ್ಗೆ ನಮ್ಮವ್ವ ನೀರ್ಗೆ ಅಂತ ಅರಬಿಯ ಬುಟ್ಟು, ಒಂದು ಮುಳ್ಗ ಮುಳ್ಗಿಸಿ, ಬಗ್ಗಿ ನೋಡಳಂತೆ, ಏನೋ ಹೊಂಗ್ಲೋ ಅಂತ ಮೊರೀತಾದೆ. ಇದೇನಪ್ಪ ಅಂತ ನೋಡುದ್ರೆ, ಒಳ್ಳೇ ಕರೀ ನಾಗ್ರಾವು ಸೆಡೇಲಿ ಅರಬಿಗೆ ರಪ ರಪಾಂತ ಹೋಡೀತಾದೆ.

ಕಮಲ : ಆಮೇಲೆ?

ಈಶ್ವರ : ನಮ್ಮವ್ವ ಅರಬೀನು ಬುಟ್ಬುಟ್ಟು... ಹಗ್ಗಾನು ಬಾವಿ ಒಳಾಕೆ ಎತ್ತಾಕ್ಬುಟ್ಟು.... ಲಬೋ ಲಬೋ ಅಂತ ಬಾಯ್ಬಂಡ್ಕೊಂಡು ಓಡ್ಬಂದ್ಬುಟ್ಳು.

ಕಮಲ : (ಕಾತರದಿಂದ)
ಏನಾಯ್ತು ಆಮೇಲೆ?

ಈಶ್ವರ : ಆಮೇಲೆ ನಮ್ಮಪ್ಪ, ನಮ್ಮ ದೊಡ್ಡಪ್ಪ, ಕುಲ್ಮೇತಕೆ ಬಂದಿದ್ದೋರು ಮೂರ್ನಾಕು ಜನ ಸೇರ್ಕೊಂಡು, ಅದ ಬಾವಿಯಿಂದ ತೆಗೆಯೊಕೆ ಏನೇನೋ ಮಾಡುದ್ರು. ಬಡ್ಡತ್ತದ್ದು ಸಲೀಸಾಗಿ ಮ್ಯಾಕೆ ಬರ್ದೇ ಹೋಯ್ತು.

ರಾಮಚಂದ್ರ : ಈಗೇನು ಬಾವಿಯಿಂದ ಮೇಲಕ್ಕೆತ್ತಿ, ಕೆಚ್ಚಿ ಬಿಸಾಕದ್ರೇನಯ್ಯ?

ಈಶ್ವರ : (ಬಹಳ ಉತ್ಸಾಹದಿಂದ ವಿವರಿಸುತ್ತಾ....)
ನೀವು ಕೇಳಿ ಸಾ ಪೂರ್ತಾ. ಭೋ ಪಸಂದಾಗಯ್ತೆ ಅದರ ಇಚಾರ.

ಕಮಲ : ನೀನು ಹೇಳು ಈಶ್ವರ.

ಈಶ್ವರ : ನಮ್ಮ ದೊಡ್ಡಪ್ಪ ಒಂದು ಮಂಕ್ರಿ ತಂದು, ಅದ್ಕೆ ನಾಕಾ ಮೂಲೆಯಿಂದ್ಲೂ ಹಗ್ಗ ಬಿಗುದು, ಬಾವಿ ಒಳಾಕೆ ಪೊಳ್ಳಗೆ ಬುಟ್ಟು, ನೀರೊಳ್ಗೆ ಮುಳ್ಗುಸಿ, ನೀರ್ನ ಮ್ಯಾಲೆ ಎಗರಾಡ್ತಿದ್ದ ನಾಗ್ರಾವು ಮಂಕ್ರಿ ಒಳಾಕೆ ಬಂದು ಕುಂತ್ಕೋವಂಗೆ ಹಗ್ಗವ ಮ್ಯಾಲಿಂದ ಅಳ್ಲಾಡಿಸ್ತಿದ್ದ.

ಕಮಲ : ಅದು ಸುಮ್ನಿತ್ತೆ.

ಈಶ್ವರ : ಅಯ್ಯೋ ರಾಮ! ಹೆಂಗೆ ನೀರು ಸೇದೋ ಹಗ್ಗಾನೆ ಕಚ್ಚೂದು ಅಂತೀರಿ. ಅಬ್ಬಬ್ಬಾ! ಹಂಗೇನಾರ ಮನುಸಂಗೆ ಕಚ್ಚುದ್ರೆ ಏನ್ ಗತಿ? ಭೋ ಕ್ವಾಪದಲ್ಲಿ ಸೆಡೆಯ ಮಂಕ್ರಿಗೆ ಎತ್ತಿ ಎತ್ತಿ ಹೊಡೀತಿತ್ತು. ಬಾವಿ ಮ್ಯಾಲಿಂದ ಅದ ನೋಡ್ತಿದ್ದೋರ್ಗೆ ಜೀವ ಡಮಡಮ ಅನ್ನೋದು.

ಕಮಲ : ನಿಮ್ಮ ದೊಡ್ಡಪ್ಪ ಒಳ್ಳೇ ಧೈರ್ಯಗಾರ ಅಂತ ಕಾಣ್ತದೆ.

ಈಶ್ವರ : (ಹೆಮ್ಮೆಯಿಂದ)

ನಮ್ಮ ದೊಡ್ಡಪ್ಪನ ಕೈಲಿ ಗರುಡ ಮಚ್ಚೆ ಅದೆ ಕಣಕ್ಕ. ಹಾವ್ನ ಕೈಲೇ ಹಿಡ್ಕೊಂಡ್ರು, ಅದೇನು ಮಾಡೋದಿಲ್ಲ.

ರಾಮಚಂದ್ರ : ಹಾಗಾದ್ರೆ ನಿಮ್ಮ ದೊಡ್ಡಪ್ಪ ಬಾವಿ ಒಳಕ್ಕೆ ಇಳ್ದೋಗಿ, ನಾಗ್ರಾವು ಹಿಡ್ಕೊಂಡು ಬರಬಹುದಿತ್ತು.

(ಈಶ್ವರ ಸ್ವಲ್ಪ ಕಕ್ಕಾಬಿಕ್ಕಿಯಾಗುತ್ತಾನೆ.)

ಕಮಲ : ನೀವು ಸ್ವಲ್ಪ ಸುಮ್ನಿರಿ ಅಂದ್ರೆ. ಎಲ್ಲಾ ಬರೀ ತಮಾಷೇನೆ ನಿಮ್ಗೆ. ನೀನು ಹೇಳೋ ಈಶ್ವರ.

ಈಶ್ವರ : ನಮ್ಮ ದೊಡ್ಡಪ್ಪ ಮ್ಯಾಲಿಂದ ಹಗ್ಗವ ಅಳ್ಳಾಡಿಸ್ತಿದ್ದಾಗ, ಮೂರ್ನಾಕು ಸತಿ ಮಂಕ್ರಿ ಒಳಾಕೆ ಬರೂದು. ಆದ್ರೆ ಮ್ಯಾಲಕ್ಕೆಳೆಯುವಾಗ ಬಾವಿ ಒಳಕ್ಕೆ ಬಿದ್ದೋಗೂದು.

ಕಮಲ : ಹಾಗಾದ್ರೆ ಈಗ ಬಾವಿಯಿಂದ ತೆಗೀಲಿಲ್ವ ಅದನ್ನ?

ಈಶ್ವರ : ನಮ್ಮ ದೊಡ್ಡಪ್ಪ ಭೋ ಚಲ್ಗಾರ. ಅದೂ ಅಲ್ಲದೆ ನಾಗಪ್ಪನ ಭಕ್ತ. ನಾಗ್ರಾವು ಬಾವೀಲೆ ಸತ್ತೋಗುಕೆ ಬುಟ್ ಬುಟ್ಟಾನಾ. ಹೆಂಗೆಂಗೋ ಮಾಡ್ತಿದ್ದ. ಕಡ್ಗೊಂದು ಸಲ ಮಂಕ್ರಿಗೆ ಕಟ್ಟಿತ್ತಲ್ಲ ಹಗ್ಗ, ಅದ್ಕೆ ಹಾವು ನುಲ್ಕೊಂಡು ಬುಡ್ತು. ಬೇಗ ಬೇಗ ಎಳೆದ್ಬುಟ್ಟ. ಮಂಕ್ರಿ ನೆಲ ಮಟ್ಟಕ್ಕೆ ಬತ್ತಿದ್ದಂಗೆ ಸರಿಯಾಗಿ ಅರ್ಧ ಮೈಯನ್ನೆ ಎತ್ಕೊಂಡು ನಿಂತಿತ್ತು. ಮಂಕ್ರಿ ಮ್ಯಾಕ್ಕೆ ಬತ್ತಿದ್ದಂತೆ, ತೂದ್ ಅತ್ತಾಗೆ ಎಸ್ದುಬುಟ್ಟ.

ಕಮಲ : ಯಾರ್ಮ್ಯೇಲಾದ್ರು ಬೀಳಲಿಲ್ವೆ ?

ಈಶ್ವರ : ಯಾರು ಇಲ್ಲದ ಕಡೇನೆ ಎಸ್ದ. ಹಂಗಾದ್ರೂ ಎಲ್ಲಾ ಬಿದ್ದಂಬೀಳಾ ಓಡ್ಬುಟ್ರು. ಬಾವಿಯಿಂದ ನಾಕ್ಮಾರು ದೂರದಲ್ಲಿ ಹೋಗಿ ಬಿದ್ದುದ್ದು, ಸೆಡೆಯ ಬಿಚ್ಚುಬುಟ್ಟು ಸುತ್ತ ನೋಡೋಕೆ ಸುರು ಮಾಡ್ಬುಡ್ತು.

ರಾಮಚಂದ್ರ : ಈಗೇನು ಹೊಡ್ದು ಎಸೆದೇನ್ರಯ್ಯ ?

ಈಶ್ವರ : ಅದೆಂಗೆ ಹೊಡ್ದು ಬುಡೂಕೆ ಆಯ್ತದೆ ಸಾ. ಸೆಡೆ ಬಿಚ್ಚಿರೂ ಹಾವ ಹೊಡ್ದೋರುಂಟೆ! ಒಂದೆರಡು ಗಳಿಗೆ ಹಂಗಾಡ್ತಾ ಇದ್ದದ್ದು, ಹಾಳಾದ್ದು ಅತ್ತಾಗೆಲ್ಲಾರ ಬೇಲಿದಿಕ್ಕ ಹೋಗ್ದೆ, ಬಾವಿ ಸುತ್ತ ಹಾಕೀರು ಚಪ್ಪಡಿ ಅಡೀಕೆ ತಿರ್ಗ ಬಂತು.

ಕಮಲ : ಆಮೇಲೆ

ಈಶ್ವರ : ಚಪ್ಪಡಿ ಅಡೀಲಿ ಸ್ವಲ್ಪ ಸಂದಿ ಇತ್ತಲ್ಲಕ್ಕ, ಅದ್ರೊಳಕ್ಕೆ ನುಗ್ಗು ಬುಡ್ತು.

ಕಮಲ : ಈಗ ಹಾವು ಅಲ್ಲಿದೆಯಾ?

ಈಶ್ವರ : ಹೂ ಕಣಕ್ಕ. ಆ ಚಪ್ಪಡಿ ಅಂಡಲೇ ಸೇರ್ಕೊಂಡದೆ.

ರಾಮಚಂದ್ರ : (ಸ್ವಲ್ಪ ಗಾಬರಿಯಿಂದ)
ಚಪ್ಪಡಿ ಜರುಕಿಸಿ ಹಾವು ಹೊಡೀಲಿಲ್ವೇನಯ್ಯ?

ಈಶ್ವರ : ಅದೆಂಗೆ ಹೊಡ್ದೀರಿ ಸಾ. ದೊಡ್ಡ ಕರೀ ನಾಗ್ರಾವು. ನೋಡುದ್ರೆ ಹಳೇ ಹಾವ್ನಂಗೆ ಕಾಣ್ತದೆ. ಅದೆಷ್ಟು ವರ್ಷದಿಂದ ಈ ಜಾಗದಲ್ಲಿ ಇದ್ದದೋ ಏನೋ? ಏಕ್‌ದಂ ಹೊಡ್ದು ಬುಡೂಕೆ ಆದದೆ?

(ತನ್ನ ಅಂಗೈಗಳನ್ನು ಜೊತೆಗೂಡಿಸಿ ತೋರಿಸುತ್ತಾ)
ಅದ್ರ ಹೆಡೆಯೇ ಇಷ್ಟಗಲ ಅದೆ...

(ತನ್ನ ಅಂಗೈಗಳನ್ನು ಅಡ್ಡಲಾಗಿ ತೋರಿಸುತ್ತಾ)
ಸರಿಯಾಗಿ ಈಪಾಟಿ.... ಇಷ್ಟುದ್ದ ಅಯ್ತೆ ಸಾ.

ರಾಮಚಂದ್ರ : ಅಪ್ಪಾ ಸಾಕು, ನಿನ್ನ ಈ ವರ್ಣನೆ ನಿಲ್ಲಿಸಯ್ಯ. ಒಳಗಿದ್ದದ್ನ ಈಚ್ಗೆ ತೆಗೆದು, ಇನ್ನೂ ಅಪಾಯ ಮಾಡುದ್ರಲ್ಲಯ್ಯ. ಚಪ್ಪಡಿ ಕೆಳ್ಗಡೆ ಸೇರ್ಕೊಂಡಿದ್ದು, ಯಾರ್ನಾದ್ರೂ ಕಚ್ಚುದ್ರೆ ಏನ್ ಮಾಡೋದು?

ಈಶ್ವರ : ಬುಡ್ತು ಅನ್ನಿ ಸಾ. ಯಾರ್ನು ಯಾಕೆ ಕಚ್ಚದು? ಎತ್ತಾಗಾರ ಹೊಂಟೋಯ್ತದೆ.

(ಅಷ್ಟರಲ್ಲಿ ಹೊರಗಡೆಯಿಂದ ಈಶ್ವರ.... ಈಶ್ವರ.... ಎಂದು ಯಾರೋ ಕರೆಯುತ್ತಿದ್ದಾರೆ. ಅದು ಕೇಳಿದ ಕೂಡಲೇ)

ಬತ್ತೀನಿ ಕಣಕ್ಕ. ನಾನು ಬಂದು ಭೋ ಹೊತ್ತಾಯ್ತು. ಹೊಯ್ತಿನಿ ಕನ್ ಸಾ.

(ಎಂದು ಇಬ್ಬರಿಗೂ ಹೇಳಿ, ಅಲ್ಲಿಂದ ನಿರ್ಗಮಿಸುತ್ತಾನೆ)

ರಾಮಚಂದ್ರ : (ತೀವ್ರವಾಗಿ ಚಡಪಡಿಸುತ್ತಾ....)

ಒಳ್ಳೇ ಗ್ರಾಚಾರ ಬಂದಂಗಾಯ್ತಲ್ಲೆ. ಲೇ ಕಮಲ, ಇಷ್ಟೊಂದು ಜನ ವಾಸ ಮಾಡೋ ಜಾಗ್ದಲ್ಲಿ, ಹಾವು ಸೇರ್ಕೊಂಡ್ರೆ ಒಳ್ಳೇದೇನೆ?

ಕಮಲ : ಒಳ್ಳೇದು ಅಂತ ಯಾರು ಹೇಳ್ತಾರೆ?

ರಾಮಚಂದ್ರ : ಈಗೇನೆ ಮಾಡೋದು?
(ಅತ್ತಿತ್ತ ಸ್ವಲ್ಪ ತಿರುಗಾಡುತ್ತಿದ್ದು, ಏನನ್ನೋ ನಿರ್ಧರಿಸಿ)

ಬಾರೆ ಬಾವಿ ಹತ್ರಕ್ಕೆ ಹೋಗಿ ಬರೋಣ.

ಕಮಲ : ನೀವು ಹೋಗಿ. ನಾನೇನು ಬಂದು ಹಾವು ಹೊಡೀತೀನಾ?

ರಾಮಚಂದ್ರ : ನಾನ್ತಾನೆ ಹೊಡೀತಿನಿ ಅಂದ್ನೆ.

ಕಮಲ : ಮತ್ಯಾಕೆ ಹೋಗ್ತಿರಾ ಅಲ್ಲಿಗೆ?

ರಾಮಚಂದ್ರ : ಲೇ ತಮಾಷೆ ಮಾಡ್ತಿದ್ದಿಯೇನೆ? ಹಾವು ಮನೆ ಪಕ್ಕ ಬಂದು ಸೇರ್ಕೊಂಡಿದೆ ಅನ್ನೊ ಪ್ರಜ್ಞೇನೆ ಇಲ್ವಲ್ಲೇ ನಿಂಗೆ?

ಕಮಲ : ಈಗೇನು ಮಾಡ್ತೀರಾ ಅಲ್ಲಿಗೆ ಹೋಗಿ?

ರಾಮಚಂದ್ರ : ನೀ ಬಾರೆ ಸುಮ್ನೆ. ಬಾಕೀದೆಲ್ಲಾ ಯಾಕೆ ನಿಂಗೆ ತಲೆಹರಟೆ.
(ಅಲ್ಲಿಂದ ಹೊರಡುತ್ತಾನೆ)

ಕಮಲ : ಓಹೋ! ನನ್ನ ಮುಂದೆ ಕೋಪ ತೋರ್ಸು ಬದಲು, ಆ ಹಾವು ಮೇಲಾದ್ರು ತೋರ್ಸಿ.

(ಎಂದು ವ್ಯಂಗ್ಯವಾಡುತ್ತಾ, ರಂಗದ ಬಲಬದಿಯಿಂದ ತೆರಳುತ್ತಾಳೆ.)

ದೃಶ್ಯ-2

[ರಂಗದ ಮಧ್ಯದಲ್ಲಿ ನೆಲಬಾವಿಯು ಕಾಣುವಂತಿರಬೇಕು. ಅದರ ಸುತ್ತ ನಾಲ್ಕು ಕಡೆಗಳಲ್ಲಿಯೂ ನಾಲ್ಕು ಚಪ್ಪಡಿಗಳನ್ನು ಹಾಸಲಾಗಿದೆ. ಅವುಗಳ ನಡುವೆ ಅಲ್ಲಲ್ಲಿ ಸಂದುಗೊಂದುಗಳಿವೆ. ಹಾವು ಒಳಹೊಕ್ಕಿರುವ ಸಂದಿಯ ಮುಂದೆ, ಸ್ವಲ್ಪ ದೂರದಲ್ಲಿ ಗಂಧದ ಕಡ್ಡಿಯನ್ನು ಹಚ್ಚಿಡಲಾಗಿದೆ. ಒಂದು ಲೋಟದಲ್ಲಿ ಹಾಲನ್ನಿಟ್ಟು ಕಾಯನ್ನು ಒಡೆದು ಒಕ್ಕಲಗಿತ್ತಿ ಬೋರಮ್ಮ ಪೂಜೆ ಮಾಡುತ್ತಿದ್ದಾರೆ. ಅವರ ಹಿಂದೆ ನಾಗಣ್ಣಾಚಾರಿ ಕೈಮುಗಿಯುತ್ತಾ ನಿಂತಿದ್ದಾರೆ. ಬೋರಮ್ಮ ಕಣ್ಣು ಮುಚ್ಚಿಕೊಂಡು ಏನನ್ನೊ ಸ್ಮರಿಸುತ್ತಾ, ಬಹಳ ಭಯ ಭಕ್ತಿಯಿಂದ ಆ ಕಲ್ಲುಚಪ್ಪಡಿಯ ಮುಂದೆ ಅಡ್ಡ ಬೀಳುತ್ತಿದ್ದಾರೆ. ಅಷ್ಟರಲ್ಲಿ ರಾಮಚಂದ್ರನು ಪ್ರವೇಶಿಸುತ್ತಾನೆ. ಅಲ್ಲಿ ನಡೆಯುತ್ತಿದ್ದ ಪೂಜೆಯ ರೀತಿ ಮತ್ತು ಭಕ್ತಿ ಪ್ರದರ್ಶನವನ್ನು ಕಂಡು...]

ರಾಮಚಂದ್ರ : ಏನ್ ಆಚಾರ‍್ರೆ.... ಬಹಳ ಜೋರಾಗಿ ಪೂಜೆ ಮಾಡ್ತಾ ಇದ್ದೀರಿ!

ನಾಗಣ್ಣಾಚಾರಿ : ಹೂ ಕಣ್, ಬನ್ನಿ ಬುದ್ಧಿ. ಏನೋ ನನ್ನಪ್ಪ ಇಲ್ಗಂಟ ಬಂದವ್ನೆ. ಅದೂ ನಾಗಪ್ಪ ಸೋಮಾರವೇ ದರ್ಶನ ಕೊಟ್ಟವ್ನೆ ಅಂದ್ಮೇಲೆ, ಏನೋ ನಮ್ಮ ತಪ್ಪು ಒಪ್ಪು ಕಂಡ್ಕೊಂಡೇ ಬಂದಿರ‍್ಬೇಕು.

ರಾಮಚಂದ್ರ : ಈಗಿನ ಕಾಲದಲ್ಲೂ ಇದ್ರಲೆಲ್ಲಾ ನಂಬ್ಕೆ ಇಟ್ಕೊಂಡಿದ್ದೀರಾ?

ನಾಗಣ್ಣಾಚಾರಿ : ಹಂಗಂದ್ರೇನ್ ಸ್ವಾಮಿ?

ರಾಮಚಂದ್ರ : ಅಲ್ಲಾ ಆಚಾರ‍್ರೆ, ವಿಷ ತುಂಬ್ಕೊಂಡು ಕಚ್ಚೂ ಹಾವ್ನ ಹೊಡೆದು ಎಸೆಯೋದು ಬಿಟ್ಟು, ನಾಗಪ್ಪ ಅಂತ ಪೂಜೆ ಮಾಡ್ತಿದ್ದೀರಲ್ಲ!

ಬೋರಮ್ಮ : ಅಯ್ಯೋ ಬುದ್ಡು ಅನ್ನಪ್ಪ. ಸೋಮವಾರ ನಾಗಪ್ಪನ ಕಂಡ್ರೆ ಎಲ್ಲಿಲ್ಲದ ಪುಣ್ಯ ಬತ್ತದೆ. ಅಂತಾದ್ದರಲ್ಲಿ ಹೊಡೀಬೇಕು ಅಂತ ಅದ್ಯಾವ ಬಾಯ್ಲಿ ಹೇಳ್ತಾಯಿದ್ದೀಯಪ್ಪ.

ರಾಮಚಂದ್ರ : ಇದ್ಕೆಂಟು ದಿನದಲ್ಲಿ ನಿಮ್ಮ ಸಂಬಂಧದಲ್ಲಿ ಯಾರೋ ಒಬ್ಬ ಹರೇದೋನೆ ಹಾವು ಕಚ್ಚಿ ಸತ್ತೋದ ಅಂತ ನೀನೇ ಹೇಳಲಿಲ್ವೆ ಬೋರಮ್ಮ?

ನಾಗಣ್ಣಾಚಾರಿ : ಅಯ್ಯೋ ಬುಡೀ ಬುದ್ಧಿ. ಅವ್ನ ಆಯ್ಸು ತುಂಬಿಬಂದಿತ್ತು ಅಂತ ಕಾಣ್ತದೆ, ಗೊಟಕ್ ಅಂದ. ಅದ್ಕೇನ್ ತಾನೆ ಮಾಡೊಕಾದದು?

ಬೋರಮ್ಮ : ಇಲ್ಲಿ ನೀರು ನೆಳ್ಳಿನ ರುಣ ತೀರಿತ್ತು ಅಂತ ಕಾಣ್ತದೆ. ಅದ್ಕೆ ಹೊಂಟೋದ. ಸಾಯೂದು ಸಾಯ್ತು ಹಾವು ಕಚ್ಚಿ ಸತ್ರೆ, ತಿರ್ಗ ನರಮನ್ಸನ ಜನ್ಮವೇ ಇಲ್ಲ ಕಣಪ್ಪ.

ರಾಮಚಂದ್ರ : ಇನ್ಯಾವ ಜನ್ಮ ಸಿಕ್ತದೆ?

ಬೋರಮ್ಮ : (ಆತನ ವ್ಯಂಗ್ಯ ಅರ್ಥವಾಗದೆ)

ಸತ್ತು ಸ್ವರ್ಗಕ್ಕೆ ಹೊಯ್ತನೆ ಕನಪ್ಪ.

ರಾಮಚಂದ್ರ : ಸ್ವರ್ಗಕ್ಕಲ್ಲ, ಮಣ್ಣುಗ್ಹೋಯ್ತನೆ ಅನ್ನು ಬೋರಮ್ಮ.

ಬೋರಮ್ಮ : ಮಕ್ಳು ಮರಿಯಿರೂ ನಿಮ್ಮ ಬಾಯಲ್ಲಿ ಯಾಕಪ್ಪ ಇಂಥಾ ಮಾತು?

(ಎನ್ನುತ್ತಾ ಪೂಜಾ ಸಾಮಗ್ರಿಗಳಿದ್ದ ಕಡೆ ಹೋಗುತ್ತಾಳೆ.)

ರಾಮಚಂದ್ರ : ಏನ್ ಆಚಾರ್ರೆ. ಮನೇ ಮಗ್ಗುಲಲ್ಲಿ ಹೀಗೆ ಹಾವು ಸೇರಿಸ್ಕೊಂಡು, ದಿನಾ ಕೈ ಮುಗಿತಿರೋಣ ಅಂತೀರಾ!

ನಾಗಣ್ಣಾಚಾರಿ : ನೀವೇನೂ ಹೆದುರ್ಕ್ಕೋಬ್ಯಾಡಿ. ನಾಗಸರ್ಪ ಶಿವನ ಪ್ರತಿರೂಪ. ಶಿವ ಬ್ಯಾರೆಯಿಲ್ಲ. ಇದು ಬ್ಯಾರೆಯಲ್ಲ. ಮನೇತಕೆ ಬಂದ ಸರ್ಪ ಹೊಡೀಬಾರ್ದು. ಹೊಡ್ದೋರ ವಂಶ ನಿರ್ವಂಶ ಆಗ್ಹೋಯ್ತದೆ.

ಬೋರಮ್ಮ : (ಆರಿಹೋಗಿದ್ದ ಗಂಧದ ಕಡ್ಡಿಯನ್ನು ಮತ್ತೆ ಹಚ್ಚಿ ಇಡುತ್ತಿದ್ದವರು....)
ಹಾವು ಬಂದಾಗ ಹೊಡೀದೆ ಬಡೀದೇ, ಅದ್ರ ತಂಟೆಗೆ ಹೋಗ್ದೇನೆ, ಪೂಜೆ ಮಾಡಿ ಕೈ ಮುಗುದ್ಬುಟ್ರೆ, ಕಣ್ಣಿಗ್ ಕಾಣ್ದಂಗೆ ಹೊಂಟೊಯ್ತದೆ ಕಣಪ್ಪ.

ನಾಗಣ್ಣಾಚಾರಿ : ಹೂ ಕಣ್ ಬುದ್ಧಿ. ನೀವು ಒಂದೇ ದುಡದಲ್ಲಿ ಕೈ ಮುಕ್ಕೊಳಿ. ಏನೂ ಆಗೋದಿಲ್ಲ.

ರಾಮಚಂದ್ರ : ಸರಿ ಹೋಯ್ತು ಆಚಾರ್ರೆ. ನೀವು ಕೈ ಮುಗಿಯೂದಲ್ಲದೆ, ನನ್ನನ್ನೂ ಮುಗೀರಿ ಅಂತೀರಾ. ನಿಮ್ಗೆ ಇನ್ನೇನು ಹೇಳೋಕಾಗಲ್ಲ. ಹಗಲು ರಾತ್ರಿ ಅನ್ನದೆ ಹತ್ತಾರು ಮಂದಿ ತಿರ್ಗಾಡೋ ಇಂಥಾ ಜಾಗ್ದಲ್ಲಿ, ಹೀಗೆ ಮಾಡ್ತೀದ್ದೀರಲ್ಲ ಸರಿಯೆ?

ನಾಗಣ್ಣಚಾರಿ : ಹಾವಿಲ್ದೇ ಇರೂ ಜಾಗ ಯಾವುದು ತೋರ್ಸಿ ಸ್ವಾಮಿ? ಆರಂಭ ಮಾಡೋ ಜನವೆಲ್ಲಾ ದಿನ ಬೆಳ್ಗಾದ್ರೆ ಸರೊತ್ತು ಸಮರಾತ್ರಿ ಅನ್ನದೆ ಹೊಲ ಮಾಳದಲ್ಲಿ ಬಿದ್ದಿರೋದಿಲ್ವೆ? ಕಾಡಲ್ಲಿ ಮೇಡಲ್ಲಿ ಅಲೆಯೋದಿಲ್ವೆ? ಅವರ್ನೆಲ್ಲಾ ಹಾವುಗಳು ಕಚ್ಚಿ ಕಚ್ಚಿ ಸಾಯಿಸ್ತಾ ಇದ್ದವೇ? ನೀವ್ಯಾಕೆ ಹಿಂಗೆ ಹೆದರ್ಕೊಂಡು ನಡ್ಗೀರಿ ಬುದ್ಧಿ.

ರಾಮಚಂದ್ರ : ಹಾಗಂತ ಹಾವನ್ನು ಮಗ್ಗುಲಲ್ಲಿ ಮಲಗಿಸ್ಕೊಬೇಕು ಅಂತೀರಾ?

ಬೋರಮ್ಮ : ಮಗ್ಗುಲಲ್ಲಿ ಮಲ್ಗಿಸ್ಕೊಂಡ್ರೆ ತಾನೆ ಏನಪ್ಪಾ? ಅಪ್ಪಣೆ ಇಲ್ದೇ ಹಾವು ಕಚ್ಚೂದಿಲ್ಲ. ಶಿವ ಅದ್ಕೆ ಇಂತೆವರ್ನ ಕಚ್ಚು ಅಂತ ಹೇಳುದ್ರೆ, ಅಂತೆವರ್ನ ಮಾತ್ರ ಅದು ಕಚ್ತದೆ. ಇಲ್ದೇ ಹೋದ್ರೆ ಅದು ಮೂಸುದು ಇಲ್ಲ; ಮುಟ್ಟೂದು ಇಲ್ಲ.

ನಾಗಣ್ಣಾಚಾರಿ: ನಾಗಪ್ಪನ ಇಚಾರದಲ್ಲಿ ಮಾತ್ರ ನೀ ಹೇಳೂದು ಕುರ್‍ತೇಟು ಕನಕ್ಕ.

ಬೋರಮ್ಮ : (ಬಹಳ ಉತ್ಸಾಹದಿಂದ)
ಹಿಂದ್ಕೆ ನಮ್ಮವ್ವ ಹೇಳ್ತಿದ್ಳು.

ನಾಗಣ್ಣಾಚಾರಿ: ಏನಂತ?

ಬೋರಮ್ಮ : ಕಳ್ಳಿಮೆಳೆದೊಡ್ಡೀಲಿ ಕಟ್ಟೆಮನೆ ಚನ್ನೇಗೌಡ ಅಂತ ಒಬ್ಬ ಇದ್ನಂತೆ. ಆ ಸುತ್ತ ಮುತ್ತ ಹತ್ತಳ್ಳಿಗೆ ದೊಡ್ಡಗೌಡ್ನಂತೆ. ಅವನ್ಗೆ ಒಬ್ನೇ ಮಗ; ಒಬ್ಳೆ ಸೊಸೆ.

ರಾಮಚಂದ್ರ : ಒಬ್ಬ ಮಗ ಇದ್ಮೇಲೆ ಒಬ್ಳೆ ಸೊಸೆ ಇರ್‍ದೆ, ಇನ್ನೆಷ್ಟು ಜನ ಇರ್‍ಬೇಕಾಗಿತ್ತಮ್ಮ?

ಬೋರಮ್ಮ : ನೀ ಸುಮ್ಕೆ ಕೇಳಪ್ಪ. ಹಂಗೆಲ್ಲ ಅಕ್ಲಾಟ ಆಡ್ಬಾರ್ದು... ಅದ್ನೇ ಹೇಳ್ತಿದ್ನಲ್ಲಾ... ಒಬ್ನೆ ಮಗ; ಒಬ್ಳೆ ಸೊಸೆ. ಮದುವೆ ಗಿದುವೆಯೆಲ್ಲಾ ಆಗಿ ಹತ್ತನ್ನೆರಡು ವರ್ಷ ಆದ್ರೂ, ಒಂದಾದ್ರು ಮಗ ಹುಟ್ಟಲಿಲ್ಲ. ಗೌಡಂಗೆ ತನ್ನ ಸುಳಿ ಒಣಗೋಯ್ತುದಲ್ಲ ಅನ್ನೂ ಚಿಂತೆ. ಮಗನ ಕೈಲೂ, ಸೊಸೆ ಕೈಲೂ ಮಾಡಿಸ್ದೇ ಇರೂ ಪೂಜೇನೆ ಇಲ್ಲ. ಎಲ್ಲಾ ದೇವ್ರಗೂ ಅಡ್ಡ ಬೀಳಿಸ್ದ. ಏನೂ ಪ್ರಯೋಜ್ನ ಆಗ್ಲಿಲ್ಲ. ಕಡೇಗೆ ಯಾರೋ ನಿಮ್ಮಂಥೆ ತಿಳ್ದೋರು ಹೇಳುದ್ರಂತೆ "ನಾಗರು ಸೇವೆ ಮಾಡ್ಸಿ, ತನಿ ಎರ್‍ಸ್ಸಿ, ಮಕ್ಕಳಾಯ್ತವೆ" ಅಂತ. ಗೌಡನ ಸೊಸೆ ಮೂರ್‍ನಾಕು ತಿಂಗ್ಳು ಅಳ್ಳಿ ಕಟ್ಟೆ ಸುತ್ತುದ್ಳು.
(ರಂಗದ ಬಲಬದಿಯಿಂದ ಈಗ ಕಮಲ ಪ್ರವೇಶಿಸುತ್ತಾಳೆ.)

ನಾಗಣ್ಣಾಚಾರಿ : (ಕುತೂಹಲದಿಂದ)

ಆಮೇಲೆ ಏನಾಯ್ತು ?

ಬೋರಮ್ಮ : ಅಳ್ಳಿಕಟ್ಟೆ ಸುತ್ತುದ್ಳು. ನಾಗರಕಲ್ಲಿಗೆ ತನಿ ಎರೀತಾ ಬಂದ್ಳು. ಹಿಂಗೆ ಮಾಡ್ತಿದ್ದಾಗ ರಾತ್ರೆ ಹೊತ್ತು ಅವಳ ಪಕ್ಕದಲ್ಲಿ ಮಗವೇ ಬಂದು ಮಲಿಕ್ಕೊಂಡಂಗೆ ಆಯ್ತಿತ್ತಂತೆ. ದಿವಸಾ ರಾತ್ರಿ ಹೊತ್ತು ನಿದ್ದಗಣ್ಣಲಿ ಮಗ ತಟ್ಟಂಗೆ ಪಕ್ಕದಲ್ಲಿ ಏನೋ ತಟ್ತಾ ತಟ್ತಾ ಗೊಣಗುಟ್ಕೊಳಂತೆ. ಒಂದು ದಿನ ಅವಳ ಗಂಡ "ಇದೇನು? ಇವ್ಳು ಹಿಂಗೆ ಗೊಣಗೊಣ ಅಂತಾಳಲ್ಲ" ಅಂತ, ಸರೊತ್ತಲಿ ಎದ್ದು ಕಡ್ಡಿ ಗೀರಿ ನೋಡನಂತೆ, ಒಂದು ದೊಡ್ಡ ನಾಗಪ್ಪ ತೆಕ್ಕೆಯ ಹಾಸ್ಕೊಂಡು ಮಲ್ಗದೆ. ಅದ ಇವಳು ಮಗ ತಟ್ಟಂಗೆ ತಟ್ತಾವಳೆ! ಆಗೇನು ತಾನೆ ಮಾಡನು? ಅಪ್ಪಾ ಎಲ್ಲಾ ನಿಂದೆ" ಅಂತ ಕೈ ಮುಗ್ದು, ಅಡ್ಬಿದ್ದು ಮ್ಯಾಕೆ ಎದ್ದು ನೋಡೂವತ್ಗೆ, ಹಾವು ಮಂಗ್ರಮಾಯ ಆಗ್ಬುಟ್ಟದೆ. ಅದಾದ ಒಂದೆರಡು ತಿಂಗುಳ್ಗೆ ಮುಟ್ಟು ನಿಂತು, ಮನೇ ತುಂಬಾ ಮಕ್ಕಳಾದವಂತೆ.

ರಾಮಚಂದ್ರ : ಏನು ಒಂದೇ ಸಾರಿ ಹದಿನೈದು ಮಕ್ಳು ಹುಟ್ಟುದುವೇನಮ್ಮ?

ಬೋರಮ್ಮ : ಇದೇನಪ್ಪ ನೀ ಹಿಂಗೆ ಆಡ್ಕೋತಿಯೆ? ಒಂದೇ ದಪ ಆಗೋದೋ ಅಂದ್ನೆ. ಆದೋ ವರ್ಷಕ್ಕೊಂದೊಂದು.

ಕಮಲ : ಅವರು ಯಾವಾಗ್ಲೂ ಹಾಗೇನೆ ತಮಾಷೆ ಮಾಡ್ತಿರ್‍ತಾರೆ, ಬೋರಮ್ಮ. ನೀನೇನು ಬೇಜಾರು ಮಾಡ್ಕೋಬೇಡ.

ರಾಮಚಂದ್ರ : ಈಗೇನು ಮಾಡ್ಬೇಕು ಅಂತ ಆಚಾರ್ರೆ?

ನಾಗಣ್ಣಾಚಾರಿ : ಏನೂ ಮಾಡುವಂಗೂ ಇಲ್ಲ.... ಬುಡವಂಗು ಇಲ್ಲ.
ಕೈಯ ಮುಗ್ದುಬುಟ್ಟು ಹೋಗ್ಮ ನಡೀರಿ...
(ಕಮಲಳ ಕಡೆ ನೋಡುತ್ತಾ)
ಮೇಸ್ಟ್ರು, ಭೋ ಹೆದರುಬುಟ್ಟವ್ರೆ ಅಂತ ಕಾಣ್ತದೆ.

ರಾಮಚಂದ್ರ : ಹೆದರಿಕೆ ಪ್ರಶ್ನೆಯಲ್ಲ ಆಚಾರ್ರೆ. ಹಾವನ್ನ ಪಕ್ಕದಲ್ಲಿ ಇಟ್ಕೊಂಡು ನೆಮ್ಮದಿಯಾಗಿರೋಕೆ ಆಗುತ್ತಾ?

ಬೋರಮ್ಮ : ನಾಗರ ಸಂಚಾರ ಎಲ್ಲಿಲ್ಲವಪ್ಪ! ನಾನು ಚಿಕ್ಕೋಳಾಗಿದ್ದಾಗ ನೋಡಿದ್ದ ನೆಪ್ಪು ಇನ್ನೂ ಚೆಂದಾಗಯ್ತೆ. ನಮ್ ಮನೆ ಸೂರ್ ಮ್ಯಾಲೆ ಒಂದ್ಸತಿ ಒಂದು ಹಾವು ತಿಂಗಳಾರುಗಟ್ಟಲೆ ವಾಸವಾಗಿತ್ತು. ಯಾರ್ಗೂ ಏನೂ ಆಗ್ಲಿಲ್ಲ. ನಮ್ಮಪ್ಪ ನಾಗಪ್ಪ ಸ್ವಾಮಿ, ಒಂದಿನ ತಾನಾಗೆ ಹೊಂಟೋದ.

ನಾಗಣ್ಣಾಚಾರಿ : ನಂಬ್ಕೊಳಿ ಸ್ವಾಮಿ. ಏನೂ ಆಗೋದಿಲ್ಲ. ನಂಬ್ಕೆಗಿಂತ ದೊಡ್ಡು ಯಾವುದಿದ್ದದು?

ರಾಮಚಂದ್ರ : ಏನಂತಾ ನಂಬ್ಕೊಳ್ಳಿ ಆಚಾರ್ರೆ?

ನಾಗಣ್ಣಚಾರಿ : ದೇವ್ರು ಅಂತ ನಂಬ್ಕೊಳಿ ಸ್ವಾಮಿ. ದೇವ್ರೆ ನಮ್ಮ ಹುಟ್ಸಿಸವ್ನೆ. ಆ ದೇವ್ರೆ ನಮ್ಮ ಬಾಳಿಸ್ತಾವ್ನೆ. ನಮ್ಮ ಉದ್ಧಾರ ಮಾಡೂನು ಅವ್ನೆ. ನಮ್ಮ ಹಾಳು ಮಾಡೂನು ಅವ್ನೆ. ಎಲ್ಲಾ ಆ ನಮ್ಮಪ್ಪಂಗೆ ಸೇರಿದ್ದು.

ಬೋರಮ್ಮ : ಹಾವಿನ ಕೈಲೇ ಕಚ್ಚಿಸ್ಕೊಂಡು ಸಾಯ್ಬೇಕಂತ ನಮ್ಮ ಹಣೇಲಿ ಬರಿದಿದ್ರೆ, ಯಾವ ಐಗಂಚಿ ಪಟ್ಣ ಹೊಕ್ಕೊಂಡ್ರು ಬುಡಲ್ತು ಕಣಪ್ಪ.

ನಾಗಣ್ಣಾಚಾರಿ : ಯಾಕೆ ? ಅವರು ಕಾಣ್ರೆ. ಹಿಂದ್ಕೆ ಮಾಭಾರತದಲ್ಲಿ ಬತ್ತದಲ್ಲ ಬುದ್ಧಿ. ಅವನ್ಯಾರೋ ಒಬ್ಬ ರಾಜ, ಹಾವು ಕಚ್ಚಿ ಸತ್ಹೋಯ್ತಿನಿ ಅಂತ ಹೆದರ್ಕೊಂಡು, ಸಮುದ್ರದ ಮಧ್ಯೆ ಮನೆ ಮಾಡ್ಕೊಂಡನಂತೆ. ಅಲ್ಲಿ ಅಡೀಕ್ಕೊಂಡಿದ್ರು ಬುಡ್ದೆ, ನಿಂಬೆ ಹಣ್ಗೊಳ್ಗೆ ತೇಲ್ಕೊಂಡು ಬಂದು ಕಚ್ಚಿತಂತಲ್ಲ!

ರಾಮಚಂದ್ರ : ಪರೀಕ್ಷಿತ ಅನ್ನೋ ರಾಜನ ಕತೆ.

ನಾಗಣ್ಣಾಚಾರಿ : ನೋಡುದ್ರಾ ಎಲ್ಲಾನು ನೀವೇ ತಿಳ್ಕೊಂಡಿದ್ದೀರಿ. ನಮ್ಮಂಥ ಎಗ್ಗರ ಕೈಲಿ ಹೇಳಿಸ್ಕೋದು ಏನೈತೆ. ಸುಮ್ನೆ ಧೈರ್ಯವಾಗಿ ಇರೋಗಿ ಸ್ವಾಮಿ.

ಬೋರಮ್ಮ : (ಚಪ್ಪಡಿಯ ಸಂದಿಯ ಮುಂದೆ ಪೂಜಿಸಿದ್ದ ಹೂವನ್ನು ತೆಗೆದುಕೊಂಡು ಬಂದು)

ಮೊಗ ತಕೊಪ್ಪ ಹೂವ. ಕೈಯ ಮುಕ್ಕೊಂಡು ಒಂದೇ ಮನಸಲಿ ಮನೆ ಒಳಾಕೆ ಹೊಂಟೋಗಪ್ಪ...

(ಎಂದು ಹೇಳುತ್ತಾ, ಅಲ್ಲಿ ಪೂಜಿಸಿದ್ದ ಹೂವನ್ನು ಅವರೆಲ್ಲರಿಗೂ ನೀಡುತ್ತಾರೆ. ವಿಧಿಯಿಲ್ಲದೆ ರಾಮಚಂದ್ರ ಕೈಯೊಡ್ಡಿ ತೆಗೆದುಕೊಳ್ಳುತ್ತಾನೆ. ಕಮಲ ಭಕ್ತಿ

ಭಾವದಿಂದ ಹೂವನ್ನು ಬೋರಮ್ಮನಿಂದ ಸ್ವೀಕರಿಸಿ, ತಲೆಗೆ ಮುಡಿದುಕೊಳ್ಳುತ್ತಾಳೆ. ನಾಗಣ್ಣಾಚಾರಿ ಕಣ್ಣಿಗೊತ್ತಿಕೊಂಡು ತನ್ನ ಕಿವಿಗಳಿಗೆ ಸಿಗಿಸಿಕೊಳ್ಳುತ್ತಾರೆ.)

ಬೋರಮ್ಮ : ಬನ್ನಿ ಮಂತೆ, ಒಳಾಕೆ ಹೋಗ್ಮ, ಇನ್ಯಾಕೆ ನಿಂತಿದ್ದೀರಿ ಎಲ್ಲಾ? ಆ ನನ್ನಪ್ಪ ಈಚ್ಗೆ ಬಂದು ಹಾಲು ಕುಡ್ಕೊಂಡು ಎತ್ತಾಗಾರ ಹೊಂಟೋಗ್ಲಿ.

ನಾಗಣ್ಣಾಚಾರಿ : ನಡೀರಿ ಬುದ್ಧಿ. ನಂಗೂ ಒಸಿ ಕೆಲ್ಸ ಅಯ್ತೆ. ಇನ್ನೇನು ಬೋರೇಗೌಡ ಬತ್ತನೆ. ಅವನ್ಗೊಂದು ಗುಳ ತಟ್ಕೊಡ್ತೀನಿ ಅಂದಿದ್ದೆ.

(ಎನ್ನುತ್ತಾ ಆತುರಾತುರವಾಗಿ ಕುಲುಮೆಯ ಕಡೆಗೆ ರಂಗದ ಎಡಬದಿಯಿಂದ ತೆರಳುತ್ತಾನೆ. ಬೋರಮ್ಮ ಮತ್ತೊಮ್ಮೆ ಬಾವಿಗೆ ಅಡ್ಡಬಿದ್ದು ನಮಸ್ಕರಿಸಿ, ಕೈ ಮುಗಿಯುತ್ತಾ ತನ್ನ ಮನೆಯ ಕಡೆಗೆ ರಂಗದ ಬಲಬದಿಯಿಂದ ನಿರ್ಗಮಿಸುತ್ತಾರೆ. ರಾಮಚಂದ್ರ ನಿಸ್ಸಹಾಯಕತೆಯಿಂದ ನೋಡುತ್ತಾ, ನಿಂತಿದ್ದಾನೆ. ಕಮಲ ಗಂಡನ ಕಡೆ ತುಂಟನಗೆ ಬೀರುತ್ತಾ, ಅವನನ್ನು ರೇಗಿಸಲೆಂದು, ಗಾಬರಿಗೊಂಡವಳಂತೆ ನಿಂತ ಕಡೆಯಿಂದ ಮೇಲಕ್ಕೆ ಸ್ವಲ್ಪ ನೆಗೆದು)

ಕಮಲ : ಅಯ್ಯಯ್ಯೋ!... ಅಲ್ನೋಡ್ರಿ ಹಾವು.

ರಾಮಚಂದ್ರ : (ತಾನು ನಿಂತಿದ್ದ ಎಡೆಯಿಂದ, ಚಂಗನೆ ಮೇಲಕ್ಕೆ ನೆಗೆದು ಮತ್ತೆ ಸ್ವಲ್ಪ ಪಕ್ಕಕ್ಕೆ ಸರಿದು)
ಎಲ್ಲೆ?.... ಎಲ್ಲೇ?

ಕಮಲ : ಅಯ್ಯೋ ನೋಡ್ರಿ, ಅಲ್ಲೇ ಹೋಗ್ತಾ ಇಲ್ವೇನ್ರಿ.

ರಾಮಚಂದ್ರ : ಎಲ್ಲೇ....

ಕಮಲ : ಆ ಚಪ್ಪಡಿ ಅಡಿಯಲ್ಲೆ ಇಲ್ವೇನ್ರಿ.

ರಾಮಚಂದ್ರ : ಲೇ ಕಮಲ, ಎಂಥಾ ಹೊತ್ನಲ್ಲೆ ನಿನ್ನ ತಮಾಷೆ?
(ಸ್ವಲ್ಪ ಬೇಸರದಿಂದ)

ಈ ಹಾಳಾದ್ ಹೆಂಗಸರಿಗೆ ಸ್ವಲ್ಪನಾದ್ರು ಸೀರಿಯಸ್‌ನೆಸ್ಸೆ ಇಲ್ಲ.

ಕಮಲ : ಈಗ ನೋಡಿ, ಈ ಕ್ಷಣದಿಂದ ನಾನು ಈಗ ತುಂಬಾ ಸೀರಿಯಸ್ಸಾಗೇ ಮಾತಾಡ್ತೀನಿ. ಅದೇನು ಹೇಳಿ?

ರಾಮಚಂದ್ರ : ನಾಗರಾವು ಬಹಳ ವಿಷ ಸರ್ಪ ಅಲ್ವೇನೆ?

ಕಮಲ : ಹೌದು. ಅದನ್ನ ಕಂಡಾಗ ಸುಮ್ನೆ ಬಿಡಬಾರದು. ಹೊಡೆದು ಸಾಯಿಸ್ಬೇಕು, ಹೊಡೀರಿ.

ರಾಮಚಂದ್ರ : ಯಾರು?

ಕಮಲ : ನೀವು.

ರಾಮಚಂದ್ರ : ನನ್ನ ಹೊಡೀರಿ.... ಹೊಡೀರಿ.... ಅನ್ನೂದ್ರಲ್ಲೇ ಇದ್ದೀಯಲ್ಲೆ....
(ಕ್ಷಣಕಾಲ ಸುಮ್ಮನಿದ್ದು)
ಹಾವು ದೇವರು ಅಂತ ನೀನು ನಂಬ್ತಿಯೇನೆ?

ಕಮಲ : ನಾನು ಅದನ್ನ ದೇವರು ಅಂತ ತಿಳ್ಕೊಂಡಿಲ್ಲ. ಆದ್ರೆ ಅದನ್ನು ಹೊಡೆದು ಕೊಲ್ಲು ಧೈರ್ಯ ನನಗಿಲ್ಲ. “ನಂಬಿ ಕೆಟ್ಟವರಿಲ್ಲವೋ ರಂಗಯ್ಯನ” ಅನ್ನೋದಿಲ್ವೆ, ಹಾಗೆ ನಾನೀಗ ಅದನ್ನ ದೇವ್ರು ಅಂತ್ಲೇ ನಂಬ್ಕೊಳ್ತೀನಿ. ಬಂದ ಆಪತ್ತನ್ನು ತಡೆಗಟ್ಟೋಕೆ ನಮ್ಮ ಕೈಯಲ್ಲಿ ಯಾವಾಗ ಶಕ್ತಿಯಿರಲ್ಲವೋ, ಆಗ ವಿಧಿಗೋ ದೈವಕ್ಕೋ ನಾವು ಮೊರೆ ಹೋಗ್ಲೆ ಬೇಕಲ್ಲವೆ?

ರಾಮಚಂದ್ರ : ನಾವು ಸಂಪೂರ್ಣ ಅಶಕ್ತರಾದಾಗ, ಆ ಮಾತು. ಈಗ ಈ ಹಾವ್ನ ನಾವು ಹೊಡೆಯೋಕೆ ಆಗಲ್ವೇನೆ?

ಕಮಲ : ಸರಿ ಹಾಗಾದ್ರೆ ಹೊಡೀರಿ.

ರಾಮಚಂದ್ರ : ಕಮಲ, ಏನೇ ಇಂಥಾ ಮಾತಾಡ್ತೀಯಾ?

ಕಮಲ : ಅಲ್ರಿ, ನೀವೇನು ಹೇಳ್ತಾ ಇರೋದು?

ರಾಮಚಂದ್ರ : ಅಲ್ವೇ ಕಮಲ, ಅಂಥಾ ವಿಷ ಜಂತೂನಾ ನಾನು ಹೊಡೆಯೋಕೆ ಹೋದಾಗ, ಏನಾದ್ರೂ ಸ್ವಲ್ಪ ವ್ಯತ್ಯಾಸ ಆದ್ರೆ?

ಕಮಲ : ವ್ಯತ್ಯಾಸ ಅಂದ್ರೇನು?

ರಾಮಚಂದ್ರ : ಅದಕ್ಕೆ ನನ್ನೇಟು ಬೀಳು ಬದಲು, ಅದೇ ನನ್ನನ್ನು ಕಚ್ಚುದ್ರೆ.

ಕಮಲ : ಅಷ್ಟೊಂದು ಹೆದರಿಕೆಯಿದ್ದ ಮೇಲೆ, ಆಚಾರ್‍ರ ಹಾಗೆ ನಂಬ್ಕೊಂಡು ಸುಮ್ನಿರಿ.

ರಾಮಚಂದ್ರ : ಸುಮ್ಮನಿರೋಕೆ ಹೇಗಾಗುತ್ತೆ. ಅಷ್ಟೂ ವಿವೇಚನೆ ಬೇಡ್ವೇನೆ...ನಾವು ಮನುಷ್ಯರಾಗಿ ಹುಟ್ಟಿ? ಯಾವುದು ವಿಷ, ಯಾವುದು ಅಮೃತ; ಯಾವುದು ಒಳ್ಳೇದು, ಯಾವುದು ಕೆಟ್ಟದ್ದು ಅನ್ನೂ ಪ್ರಜ್ಞೆ ಬೇಡ್ವೇನೆ?

ಕಮಲ : ಪ್ರಜ್ಞೆ ಬೇಕು. ಯಾರು ಬೇಡ ಅನ್ನೋರು? ಆದ್ರೆ ಬರೀ ಪ್ರಜ್ಞೆಯಿಂದ ಏನನ್ನೂ ಸಾಧಿಸೋಕೆ ಆಗಲ್ಲಾರಿ. ಅದನ್ನು ಅರಿತು ಆಚರಣೆಗೆ ತರುವಂಥ ಕೆಚ್ಚು ಬೇಕು.

ರಾಮಚಂದ್ರ : (ಕಮಲಳನ್ನು ದೃಷ್ಟಿಸಿ ನೋಡುತ್ತಾ)

ನಿಜ ಕಣೆ, ನೀನು ಹೇಳುವಂಥ ಧೈರ್ಯ ನನ್ನಲ್ಲಿಲ್ಲ. ಆದ್ರೆ ಅವರಂತೆ ಮೂಢ ನಂಬಿಕೆಯಿಂದ ಬಾಳೋದು ಸರಿ ಅಂತೀಯ?

ಕಮಲ : ಸರಿಯೋ? ತಪ್ಪೋ? ಆದರೆ ಇಷ್ಟು ಮಾತ್ರ ನಿಜ ಕಣ್ರಿ. ಅವರ ಮೂಢನಂಬಿಕೆಗಿಂತ, ನಿಮ್ಮ ಕಾರ್ಯರೂಪಕ್ಕೆ ಬಾರದ ವಿವೇಚನೆಯಿದೆಯಲ್ಲಾ, ಇದು ಹೆಚ್ಚು ಅಪಾಯಕಾರಿ.
(ರಾಮಚಂದ್ರನನ್ನು ಮತ್ತೆ ರೇಗಿಸಿ ತಮಾಷೆ ಮಾಡಲೆಂದು)
ಅಯ್ಯೋ...ಈಚೆಗೆ ಬಂತಲ್ರಿ...ಹಾವು... ಹಾವು...

ರಾಮಚಂದ್ರ : (ಬಾವಿಯ ಕಡೆಗೆ ನೋಡುತ್ತಾ, ಅವಳ ತಲೆಯ ಮೇಲೆ ಮೆಲ್ಲಗೆ ಒಂದು ಏಟು ಹಾಕುತ್ತಾ)
ಲೇ, ನಿಂಗೆ ಸುಮಾನ ಕಣೆ.

ಕಮಲ : (ಅವನಿಂದ ದೂರ ಸರಿದು, ತುಂಟ ನಗೆ ಬೀರುತ್ತಾ, ಏನನ್ನೋ ಜ್ಞಾಪಿಸಿಕೊಂಡು) ಅಲ್ರಿ, ಈಗ ತಾನೆ ನಿಮ್ಮ ಸ್ಟೂಡೆಂಟ್ಸ್ ಬಂದಿದ್ದಾಗ ಬಸವಣ್ಣನವರ ಒಂದು ವಚನ ಕುರಿತು ನೀವು ಹೇಳಿದ್ದು ಜ್ಞಾಪಕವಿದೆಯಾ?

ರಾಮಚಂದ್ರ : ಯಾವುದೇ ಅದು?

ಕಮಲ : (ರಾಗವಾಗಿ)
ದಯವಿಲ್ಲದ ಧರ್ಮವದೇವುದಯ್ಯ!

ರಾಮಚಂದ್ರ : ಹೌದು ಕಣೆ, ಹೇಳ್ದೆ.

ಕಮಲ : ನಿಮ್ಮಂತೆ ಹಾವು ಒಂದು ಜೀವಿಯಲ್ವೆ? ಅದನ್ಯಾಕ್ರಿ ಕೊಲ್ತೀರಿ. ಅದರ ಪಾಡಿಗೆ ಅದನ್ನ ಬಿಡಿ.

ರಾಮಚಂದ್ರ : ಲೇ, ಬಸವಣ್ಣನವರ ವಚನ ಕಟ್ಕೊಂಡು ಸಾಯ್ತಿಯೇನೆ? ಅವರು ಹೇಳಿದ್ದಾರೆ ಅಂತ ಜೀವನದಲ್ಲಿ ಹಾಗೆ ಇರೋಕಾಗುತ್ತೇನೆ?

ಕಮಲ : ಅಂದ್ರೆ, ಆ ವಚನ ಇರೋದು?

ರಾಮಚಂದ್ರ : ಪಾಠ ಮಾಡೋಕೆ; ಅರ್ಥ ಹೇಳೋಕೆ; ತಾತ್ಪರ್ಯ ಬರ್ಯೋಕೆ.

ಕಮಲ : ತಿಂಗ್ಳು ತುಂಬ್ತಿದ್ದಂಗೆ ಸಂಬಳ ಎಣ್ಸೋಕೆ.

ರಾಮಚಂದ್ರ : ಆಡ್ಕೋಳ್ತೀಯೇನೆ?

ಕಮಲ : ಇಲ್ರಿ. ತುಂಬಾ ಸೀರಿಯಸ್ಸಾಗೆ ನಿಮ್ಮನ್ನು ಕೇಳ್ತಾಯಿದ್ದೀನಿ. ಆ ವಚನದ ಅಂತರಾರ್ಥಕ್ಕೂ, ನಮ್ಮ ಬದುಕಿನ ಆಚರಣೆಗೂ ಏನೇನು ಸಂಬಂಧವಿಲ್ಲವೇನ್ರಿ?

ರಾಮಚಂದ್ರ : ಅದು ಪಾಠದ ವಿಷಯ ಕಣೆ ಕಮಲ. ಅಲ್ಲಿ ಕೇವಲ ಶಬ್ದಗಳ ಜೊತೆ ಮಾತ್ರ ನಾವು ಆಟ ಆಡ್ತೀವಿ; ಕಥೆ ಕಟ್ತೀವಿ; ಪ್ರಪಂಚ ನೋಡ್ತೀವಿ...
(ಹಾವು ಅಡಗಿರುವ ಸಂದಿಯ ಕಡೆ ಕೈ ತೋರಿಸುತ್ತಾ)
ಇದು ಜೀವನದ ವಿಷಯ. ಇಲ್ಲಿ ಸಾವು ಬದುಕಿನ ನಡುವೆ ಹೋರಾಟ ಮಾಡ್ಬೇಕಾಗಿದೆ.

ಕಮಲ : ಹಾಗಾದ್ರೆ ಸಾಹಿತ್ಯ ಮತ್ತು ಧರ್ಮಕ್ಕೂ, ಈ ನಮ್ಮ ಜೀವನಕ್ಕೂ ಅಜಗಜಾಂತರ ಅಂತೀರಾ?

ರಾಮಚಂದ್ರ : (ನಗುತ್ತಾ)

ಕೇವಲ ಅಜ-ಗಜ ಅಲ್ಲ ಕಣೆ. ಬಿಂದು ಸಿಂಧುವಿನಷ್ಟು ಅಂತರವಿದೆ ಅಂತ ತಿಳ್ಕೊ. ಮನುಷ್ಯನೇನಾದ್ರು ಆ ಶಬ್ದಗಳ ಹಿಂದೆ ತನ್ನ ಬದುಕನ್ನು ಓಡ್ಸಿದ್ದರೆ, ಬಹುಶಃ ಈ ಜಗತ್ತು ಸ್ವರ್ಗವಾಯ್ತಿತ್ತೇನೋ?

ಕಮಲ : ಮತ್ತೆ, ಜೀವನಕ್ಕೆ ಅಳವಡಿಸಿಕೊಳ್ಳಲಾಗದ ಈ ವಿಷಯಗಳನ್ನೆಲ್ಲಾ ನಾವು ಯಾಕ್ರಿ ಓದಬೇಕು? ಯಾಕ್ರಿ ತಿಳ್ಕೊಬೇಕು?

ರಾಮಚಂದ್ರ : ಒಳ್ಳೆ ಕಥೆ ಕಣೆ ನಿಂದು! ಯಾಕ್ ಓದಬೇಕು? ಹೊಟ್ಟೆ ಪಾಡಿಗೆ ಓದಬೇಕು.... ಯಾಕ್ ತಿಳ್ಕೊಬೇಕು?

(ಸರಿಯಾದ ಉತ್ತರ ಹೇಳಲು ತಿಳಿಯದೆ, ಮತ್ತೆ ತನ್ನಲ್ಲಿಯೇ ನಿಧಾನವಾಗಿ ಹೇಳಿಕೊಳ್ಳುತ್ತಾ)

ಯಾಕ್ ತಿಳ್ಕೊಬೇಕು ಅಂದ್ರೆ....

(ಉತ್ತರ ಹೊಳೆಯದೆ, ಅವಳ ಪ್ರಶ್ನೆಯನ್ನು ಪುನಹ ಅವಳಿಗೆ ಕೇಳುತ್ತಾನೆ.)

ಯಾಕೆ ತಿಳ್ಕೊಬೇಕು?

ಕಮಲ : (ಕಣ್ಣನ್ನು ಅರಳಿಸಿ, ಅವನನ್ನೇ ನೋಡುತ್ತಿರುತ್ತಾಳೆ.)

ರಾಮಚಂದ್ರ : (ಸ್ಪಷ್ಟವಾದ ಉತ್ತರವನ್ನು ಹೇಳಲಾಗದೆ)

ಒಳ್ಳೇ ರದ್ಧಾಂತ ಕಣೆ ನಿಂದು. ಈ ಹಾವು ಹೊಡ್ಸೋದೆಂಗೆ ಅಂತ ನಾನು ಒದ್ದಾಡ್ತಿದ್ರೆ, ನಿಂದ್ ಬ್ಯಾರೆ ಪುರಾಣ.

ಕಮಲ : ಸರಿ ಬಿಡಿ. ನಾನಿನ್ನು ಅಡಿಗೇನೆ ಮಾಡಿಲ್ಲ.

(ಎನ್ನುತ್ತಾ ಹೊರಡಲು ಸಿದ್ಧಳಾಗುತ್ತಾಳೆ. ಅವಳನ್ನು ರಾಮಚಂದ್ರ ತಡೆಯುತ್ತಾ)

ರಾಮಚಂದ್ರ : ಲೇ ಕಮಲ ಸ್ವಲ್ಪ ನಿಲ್ಲೆ ಇಲ್ಲಿ. ಒಂದೆರಡು ನಿಮಿಷದಲ್ಲಿ ಏನಾದ್ರೂ ಮಾಡಿ, ಆಚಾರ್ರನ್ನ ಒಪ್ಪಿಸ್ಕೊಂಡು ಕರ್ಕೊಂಡು ಬರ್ತೀನಿ. ಈ ಹಾವು ಬಿಟ್ಕೊಂಡು ಮಾತ್ರ ನಾನಿಲ್ಲಿ ಇರಲಾರೆ.

ಕಮಲ : ಒಳ್ಳೆ ಗ್ರಾಚಾರ ಬಂತಲ್ಲ ನನಗೆ.

(ಸ್ವಲ್ಪ ಆಲೋಚಿಸಿ)
ಹೂ...ಬೇಗ ಹೋಗ್ಬನ್ನಿ.

ರಾಮಚಂದ್ರ : (ಅಲ್ಲಿಂದ ಹೊರಡುತ್ತಾ)
ಲೇ ಹುಷಾರು ಕಣೆ. ತೀರಾ ಹತ್ತಿರಕ್ಕೆ ಹೋಗ್ಬೇಡ. ಆ ಕಡೇನೆ ನೋಡ್ತಾ ಇರು.

ಕಮಲ : ರ್‍ರೀ, ಒಂದು ಮಾತು. ನೀವು ಸಮಗ್ರ ಕ್ರಾಂತಿ ಬಗ್ಗೆ ಭಾಷಣ ಮಾಡುವಾಗ ಹಾವು ಬಂದ್ರೆ ಏನು ಮಾಡ್ತೀರಾ?

ರಾಮಚಂದ್ರ : ತಲೆಹರಟೆ ಕಣೆ ನೀನು...
(ಎಂದು ಅಬ್ಬರಿಸಿ, ಆತುರಾತುರವಾಗಿ ತೆರಳುತ್ತಾನೆ. ಅವನು ಹೋಗುವುದನ್ನೇ ನೋಡುತ್ತಿದ್ದ ಕಮಲ, ಒಂದು ಬಗೆಯ ವಿಷಾದ ಭಾವದಿಂದ ನಗುತ್ತಾಳೆ.)

ದೃಶ್ಯ-3

[ಕಮ್ಮಾರ ಶಾಲೆ. ಈಶ್ವರ ತಿದಿಯೊತ್ತುತ್ತಿದ್ದಾನೆ. ನಾಗಣ್ಣಾಚಾರಿ ಗುಳವನ್ನು ಕಾಯಿಸುತ್ತಿದ್ದಾರೆ. ಅದು ಕಾದಂತೆಲ್ಲಾ, ಹೊರತೆಗೆದು ಸುತ್ತಿಗೆಯಿಂದ ಬಡಿಯುತ್ತಿದ್ದಾರೆ. ಹೀಗೆ ಅವರಿಬ್ಬರಿಂದ ಕಾಯಿಸುವ ಮತ್ತು ತಟ್ಟುವ ಕೆಲಸ ನಡೆಯುತ್ತಿದೆ. ಇಲ್ಲಿಗೆ ರಾಮಚಂದ್ರ ಬರುತ್ತಾನೆ. ಕೆಲಸದಲ್ಲಿ ಮಗ್ನರಾಗಿದ್ದ ಅವರಿಬ್ಬರಿಗೂ ರಾಮಚಂದ್ರ ಬಂದಿದ್ದರ ಪರಿವೇ ಇಲ್ಲ. ರಾಮಚಂದ್ರ ಒಂದು ಕ್ಷಣಕಾಲ ಸುತ್ತಲೂ ನೋಡುತ್ತಿದ್ದು, ನಂತರ ತಾನೇ ನಾಗಣ್ಣಾಚಾರಿಯನ್ನು ಮಾತನಾಡಿಸುತ್ತಾನೆ.]

ರಾಮಚಂದ್ರ : ಆಚಾರ್ರೆ...ಆಚಾರ್ರೆ...ಏನು ಸುತ್ತಿಗೆ ಕೈಗೆ ತಕೊಂಡ್ರೆ, ನಿಮ್ಗೇನು ಪ್ರಪಂಚದ ಪರಿವೇನೆ ಇರೋದಿಲ್ಲ!

ನಾಗಣ್ಣಾಚಾರಿ : (ತಲೆಯೆತ್ತಿ ರಾಮಚಂದ್ರನ ಕಡೆ ನೋಡಿ, ಮತ್ತೆ ಬಡಿಯುತ್ತಲೇ ಇದ್ದು) ಬನ್ನಿ ಸ್ವಾಮಿ.... ಬನ್ನಿ.

ರಾಮಚಂದ್ರ : (ತಾನು ಬಂದರೂ ಹೆಚ್ಚು ಗಮನ ಕೊಡದೆ, ಅವರಿನ್ನೂ ಸುತ್ತಿಗೆ ಬಡಿಯುತ್ತಿರುವುದನ್ನು ಕಂಡು, ಸ್ವಲ್ಪ ಅಸಮಾಧಾನದಿಂದ)

ಆಚಾರ್ರೆ.... ನಿಮ್ಜೊತೇಲಿ ಸ್ವಲ್ಪ ಮಾತಾಡ್ಬೇಕಾಗಿತ್ತು, ಅದಕ್ಕೆ ಬಂದೆ.

ನಾಗಣ್ಣಾಚಾರಿ : (ರಾಮಚಂದ್ರ ಹೇಳಿದ್ದೇನೆಂದು ಸರಿಯಾಗಿ ಕೇಳಿಸದೆ, ತಟ್ಟುವುದನ್ನು ನಿಲ್ಲಿಸಿ)

ಏನು ಸ್ವಾಮಿ?

ರಾಮಚಂದ್ರ : ಈ ಶಬ್ದದಲ್ಲಿ ನಾನ್ಹೇಳೂದು ಎಲ್ಲಿ ಕೇಳ್ಸುತ್ತೆ?

ನಾಗಣ್ಣಾಚಾರಿ : ಹಂಗಾದ್ರೆ ಒಸಿ ಹೊತ್ತು ತಡೀರಿ ಸ್ವಾಮಿ. ಇದ ತಟ್ಟುಬುಟ್ಟು ಬತ್ತೀನಿ.

(ಒಂದೆರಡು ನಿಮಿಷಗಳ ಕಾಲ ರಾಮಚಂದ್ರ ನಿಲ್ಲುತ್ತಾನೆ. ಈ ಅವಧಿಯಲ್ಲಿ "ನಂಬಿ ಕೆಟ್ಟವರಿಲ್ಲವೋ ರಂಗಯ್ಯನ; ನಂಬದೆ ಕೆಟ್ಟವರುಂಟು" ಎಂಬ ಪುರಂದರದಾಸರ ಪದದ ಒಂದೆರಡು ಸಾಲುಗಳನ್ನು ನೇಪಥ್ಯದಲ್ಲಿ ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿರಬೇಕು. ಈ ಹಿನ್ನೆಲೆ ಗಾಯನವು ರಂಗಮಂಟಪವನ್ನೆಲ್ಲಾ ಆವರಿಸುತ್ತಿದ್ದಂತೆಯೇ, ಆಚಾರ್ರು ಗುಳವನ್ನೂ ಚೆನ್ನಾಗಿ ತಟ್ಟಿ, ಹದ ಮಾಡಿ, ಅದನ್ನು ಒಂದೆಡೆ ಇಟ್ಟು, ಈಶ್ವರನಿಗೆ ಏನನ್ನೋ ಹೇಳಿ,

ಮುಂದಕ್ಕೆ ಬರುತ್ತಾರೆ. ಸುರಿಯುತ್ತಿರುವ ಬೆವರನ್ನು ಒಂದು ಚಿಕ್ಕ ಬಟ್ಟೆಯಿಂದ ಒರೆಸಿಕೊಳ್ಳುತ್ತಾ ನಿಲ್ಲುತ್ತಾರೆ.)

ರಾಮಚಂದ್ರ : ಏನು ಆಚಾರ್ರೆ? ಹಾವ್ನ ಅಲ್ಲಿ ಬಿಟ್ಟು ಇಷ್ಟು ಆರಾಮವಾಗಿದ್ದೀರಲ್ಲ!

ನಾಗಣ್ಣಾಚಾರಿ : ಇನ್ನೇನು ಮಾಡೋಣ ಬುದ್ಧಿ?

ರಾಮಚಂದ್ರ : ಅದನ್ನ ಏನಾದ್ರು ಮಾಡಿ ಹೊಡಿಯೋಣ ಬನ್ನಿ.

ನಾಗಣ್ಣಾಚಾರಿ : ಬುದ್ಧಿ.... ನೀವು ಇದ್ಯಾ ಬುದ್ಧಿ ಕಲ್ತೀರಿರು. ನಿಮ್ಜೊತೇಲಿ ನಾನು ಹೆಚ್ಚಿಗೆ ಮಾತಾಡುದ್ರೆ ತೆಪ್ಪಾಯ್ತದೆ. ನೋಡಿ.... ನಮ್ಮ ಜೀವ ಹೋದ್ರು ಚಿಂತಿಲ್ಲ. ನಾವು ಮಾತ್ರ ನಾಗಪ್ಪನ ಸಿಂತೇಗೆ ಹೋಗೋರಲ್ಲ. ಹಣೇಲಿ ಬರ್ದಿದ್ದಂಗಾಗುತ್ತೆ.

ರಾಮಚಂದ್ರ : ಹಣೇಲಿ ಬರ್ದಂಗಾಯ್ತದೆ ಅಂತ ಕೆಟ್ಟದ್ದನ್ನೆಲ್ಲಾ ಹಿಂಗೆ ಪಕ್ಕದಲ್ಲೇ ಬಿಟ್ಕೊಂಡಿರೋದು ಸರಿಯೇ?

ನಾಗಣ್ಣಾಚಾರಿ : ಹಂಗಂತ ಈ ಪ್ರಪಂಚದಲ್ಲೀರೋ ಕೆಟ್ಟದ್ದನ್ನೆಲ್ಲಾ ನೀವು ಹೊಡೆದಾಕ್ಬುಟ್ಟೀರಾ ಸ್ವಾಮಿ?

ರಾಮಚಂದ್ರ : ಎಲ್ಲಾನು ಹೊಡೆಯುದಕ್ಕಾಗುತ್ತಾ? ಏನೋ ನಮ್ಮ ಕಣ್ಣಿಗೆ ಬಿದ್ದುದನ್ನ; ನಮ್ಮ ಕೈಲಾದುದ್ದನ್ನ ತೊಡೆದಾಕ್ಬೇಕು.

ನಾಗಣ್ಣಾಚಾರಿ : ಯಾವುದ್ನೇ ಆಗ್ಲಿ ಇದು ಕೆಟ್ಟದ್ದು; ಇದು ಒಳ್ಳೇದು ಅಂತ ಹೆಂಗೇಳ್ತೀರಿ ಬುದ್ಧಿ?

ರಾಮಚಂದ್ರ : ಅಷ್ಟು ಗೊತ್ತಾಗಲ್ವೆ ಆಚಾರ್ರೆ, ನೋಡಿ...ಈಗ ಈ ಹಾವಿದೆ. ಅದ್ರೊಳಗೆ ವಿಷ ತುಂಬಯ್ತೆ. ಆದ್ದರಿಂದ ಅದು ಕೆಟ್ಟದ್ದು. ಅದನ್ನು ನಾಶ ಮಾಡ್ಬೇಕು.

ನಾಗಣ್ಣಾಚಾರಿ : ಹಾವು ನೋಡ್ಬುಟ್ಟು ನೀವು ಹಿಂಗಂತೀರಿ. ಆ ಹಾವು ನಮ್ಮನ್ನ ಕಂಡು "ಈ ಮನುಸ್ನ ಮನಸೊಳಗೆಲ್ಲಾ ವಿಷ ತುಂಬಯ್ತೆ. ಅದ್ಕೇ ಇವ್ನು ನನ್ನ ಕೊಲ್ಲೂಕೆ ಬತ್ತನೆ. ಇವ್ನ ಸುಮ್ನೆ ಬಿಡಬಾರದು" ಅನ್ಕೊಬೋದು. ನಮ್ಮ ದೃಷ್ಟೀಲಿ ಅದು ಕೆಟ್ಟದ್ದು; ಅದರ ದೃಷ್ಟೀಲಿ ನಾವು ಕೆಟ್ಟೋರು. ಇಂಥಾ ಜಗತ್ನಲ್ಲಿ ಯಾರು ಉಳೀಬೇಕು; ಯಾರು ಅಳೀಬೇಕು?

ರಾಮಚಂದ್ರ : ಏನ್ ಆಚಾರ್ರೆ? ಒಳ್ಳೇ ಲಾಯರ್ ತರ ತಲೇ ಓಡಿಸ್ತಾ ಇದ್ದೀರಲ್ಲ!

ನಾಗಣ್ಣಾಚಾರಿ : ಬುಡೀ ಬುದ್ಧಿ... ನಿಮ್ಮ ಮುಂದೆ ನಾವ... ಸುಮ್ಕೆ ಏನೋ ಹೇಳ್ದೆ. ನೀವು ಏನಾದರೂ ಅನ್ನಿ ಬುದ್ಧಿ, ನಾವು ಮಾತ್ರ ನಾಗಪ್ಪನ ತಂಟೇಗೆ ಬರೋರಲ್ಲ...
(ಅಷ್ಟರಲ್ಲಿ ಆಚಾರಿ... ಆಚಾರಿ... ಎಂದು ಕೂಗುತ್ತಾ, ಆ ಊರಿನ ತಮಡಪ್ಪನವರು ಬರುತ್ತಾರೆ. ಈಶ್ವರ ದೇವಾಲಯದ ಪೂಜಾರಿಗಳಾದ ಅವರ ಹಣೆಯಲ್ಲಿ ವಿಭೂತಿಯ ಕಟ್ಟು ಶೋಭಿಸುತ್ತಿದೆ.)

ನಾಗಣ್ಣಾಚಾರಿ : (ತಮಡಪ್ಪನವರನ್ನು ಕಂಡು)
ಓ... ಬನ್ನಿ ಅಯ್ನೋರೇ, ಬನ್ನಿ. ಇದೇನು ಬಡವರ ಮನೇಗೆ ಭಾಗ್ಯ ಬಂದಂಗೆ ಬಂದ್ರಲ್ಲ!

ತಮಡಪ್ಪ : ಇಲ್ಲೇ ಬಂದೆ ಕಣಯ್ಯ. ಈ ಬೆಟ್ಟುಗಡ್ಲು ಒಸಿ ಮೊಂಡ ಆಗ್ಹೋಗಿತ್ತು. ತಟ್ಟಿಸ್ಕೊಂಡು ಹೋಗೋಣ ಅಂತ ಬಂದೆ. ತಟ್ಕೊಡ್ತೀಯ ಈಗ.

ನಾಗಣ್ಣಾಚಾರಿ : (ಬೆಟ್ಟುಗಡ್ಲನ್ನು ಅವರಿಂದ ತನ್ನ ಕೈಗೆ ತೆಗೆದುಕೊಂಡು ನೋಡಿ)
ಓಹೋಹೋ.... ಏನ್ ಸ್ವಾಮಿ, ಈಪಾಟಿ ತುಕ್ಕು ಹಿಡ್ದೋಗೈತೆ! ಒಂದು ಹೊಸ್ದೆ ಮಾಡಿಕೊಡ್ತೀನಿ ಹಾಕಿ.

ತಮಡಪ್ಪ : ನಾನೇನು ಕಡಿಯೋಕೆ, ಕತ್ತರಿಸೋಕೆ ಹೋಗ್ಬೇಕೆ! ಸುಮ್ನೆ ಮನೇಲಿ ಇರ್ಲಿ ಅಂತ. ಇದ್ನೆ ತಟ್ಟಿಕೊಡಯ್ಯ.
(ರಾಮಚಂದ್ರನ ಕಡೆ ನೋಡುತ್ತಾ)
ಇವರ್‍ಯಾರು? ಹೊಸುಬ್ರು!

ನಾಗಣ್ಣಾಚಾರಿ : ನೀವು ಕಾಣೂಕೆ ಕಾಣ್ರಿ ಇವ್ರು. ನಮ್ಮೂರ್ ಕಾಲೇಜ್ನಲ್ಲಿ ಮೇಷ್ಟ್ರಾಗವ್ರೆ. ಆಗ್ಲೇ ಬಂದು ಐದಾರು ತಿಂಗಳಾಯ್ತು.

ರಾಮಚಂದ್ರ : ನಮಸ್ಕಾರ.

ತಮಡಪ್ಪ : ನಮಸ್ಕಾರ. ನಿಮ್ಮನ್ನ ನಾನು ಇದುವರೆಗೆ ನೋಡೇ ಇಲ್ವಲ್ಲ. ನೀವೇನೂ ಒಂದ್ಸಾರಿನೂ ದೇವಸ್ಥಾನದ ಕಡೆ ಬಂದಂಗೆ ಕಾಣಿಸ್ಲಿಲ್ಲ.

ನಾಗಣ್ಣಾಚಾರಿ : (ನಗುತ್ತಾ)
ಇವರ್ಗೆ ದೇವ್ರು ದಿಂಡ್ರು ಅಂದ್ರೆ ಅಷ್ಟುಕ್ಕಷ್ಟೆ.

ರಾಮಚಂದ್ರ : ಹಾಗೇನಿಲ್ಲ. ಆ ಕಡೆ ಬರೂಕಾಗ್ಲಿಲ್ಲ.

ನಾಗಣ್ಣಾಚಾರಿ : (ಇದ್ದಕ್ಕಿದ್ದಂತೆ ಏನೋ ಹೊಳೆದಂತಾಗಿ, ರಾಮಚಂದ್ರನ ಕಡೆ ತಿರುಗಿ)
ನಮ್ಮ ಅಯ್ನೋರು ದೇವ್ರು ಬಂದಂಗೆ ಬಂದವ್ರೆ. ಅವರ್ನು ಕೇಳ್ಬುಡಿ, ಈಗೇನ್ಮಾಡಬೇಕು ಅಂತ? ಅವರೆಂಗೆ ಹೇಳ್ತಾರೋ ಹಂಗೇ ಮಾಡಿ.
(ರಾಮಚಂದ್ರ ಮೌನದಿಂದಿರುವುದನ್ನು ಕಂಡು)
ಯಾಕ್ ಸ್ವಾಮಿ, ಸುಮ್ಮನಾಗ್ಬುಟ್ರಿ?

ತಮಡಪ್ಪ : (ಕುತೂಹಲದಿಂದ)
ಏನ್ ಆಚಾರಿ ಸಮಾಚಾರ? ಏನಾದ್ರು ತಂಟೆ ತಕರಾರೆ?

ನಾಗಣ್ಣಾಚಾರಿ : ನಂದಲ್ಲ ಕಣ ಹೇಳಿ. ನಮ್ಮ ಬುದ್ಧಿಯವರದ್ದು. ಇವರೊಂದು ಇಕ್ಕಟ್ನಲ್ಲಿ ಸಿಗಾಕೊಂಡವ್ರೆ. ಅವರು ಹೇಳೂದೆ ಒಂದು; ನಾವು ಹೇಳೂದೆ ಒಂದಾಗಯ್ತೆ. ಅದಕ್ಕೆ ನೀವೇನಾರ ಹೇಳುದ್ರೆ, ಇವರ್ಗೆ ಒಸಿ ಸಮಾಧಾನ ಆದದೇನೋ ಅಂತ.

ತಮಡಪ್ಪ : ಏನ್ ಮೇಷ್ಟ್ರೆ ಸಮಾಚಾರ?

ರಾಮಚಂದ್ರ : (ಹೇಳಲು ಸಂಕೋಚಪಡುತ್ತಾ)
ಏನೂ ಇಲ್ಲ.

ನಾಗಣ್ಣಾಚಾರಿ : ಹೇಳಿ ಸ್ವಾಮಿ. ಅದ್ಯಾಕ್ ಮುಚ್ಚಿಡ್ತೀರಿ... ಇಲ್ದೇದ್ರೆ ನಾನೇ ಹೇಳ್ತೀನಿ ಬುಡಿ...
(ತಮಡಪ್ಪನವರ ಕಡೆ ನೋಡುತ್ತಾ)
ಅಯ್ನೋರ, ನಮ್ಮ ನೆಲ್ಬಾವಿ ಕಾಣ್ರಾ ನೀವು?

ತಮಡಪ್ಪ : ಹೂ.... ಅಲ್ಲಯ್ತಲ್ಲ, ಮನೆ ಪಕ್ಕದಲ್ಲಿ.

ನಾಗಣ್ಣಾಚಾರಿ : ಅದ್ರೊಳಕ್ಕೆ ಹೊತಾರೆ ಒಂದು ಹಾವು ಬಿದ್ದೋಗಿತ್ತು.

ತಮಡಪ್ಪ : (ಹಾವು ಎಂದ ಕೂಡಲೆ ಸ್ವಲ್ಪ ಗಾಬರಿಗೊಂಡಂತಾಗಿ)
ಎಂಥದು?

ನಾಗಣ್ಣಾಚಾರಿ : ನಾಗರಾವು ಕಣ ಹೇಳಿ. ಬಲೇ ದೊಡ್ಡದು. ಏಳಡೆ ಸರ್ಪ ಇದ್ದಂಗಯ್ತೆ!

ತಮಡಪ್ಪ : (ತಾವು ನಿಂತಿದ್ದ ಕಡೆಯಿಂದ ಸ್ವಲ್ಪ ಪಕ್ಕಕ್ಕೆ ಸರಿಯುತ್ತಾ)
ಈಗ ಏನಾಯ್ತುಯ್ಯ ಅದು?

ನಾಗಣ್ಣಾಚಾರಿ : (ತಮಡಪ್ಪನವರ ಗಾಬರಿಯನ್ನು ಗುರುತಿಸಿ)
ಇದೇನ್ ಸ್ವಾಮಿ, ನೀವೂ ಹೆದರ್ಕೊಂಡಂಗೆ ಕಾಣ್ತದೆ!

ತಮಡಪ್ಪ : ಹಾವು ಅಂದ್ರೆ ಹಡಗು ನಡಗುತ್ತಂತೆ ಕಣಯ್ಯ!

ನಾಗಣ್ಣಾಚಾರಿ : ಹಾಂಗಾದ್ರೆ ನೀವೂ ನಮ್ಮ ಮೇಷ್ಟ್ರಂಗೆ ಅನ್ನಿ.

ತಮಡಪ್ಪ : ಅಂದ್ರೆ?

ನಾಗಣ್ಣಾಚಾರಿ : ನಾಗರಾವ್ನ ಹೊಡೀಬೇಕು ಅಂತೀರಿ.

ತಮಡಪ್ಪ : ಎಲ್ಲಾದ್ರು ಉಂಟೇನಯ್ಯ? ನಾಗ್ರಾವು ಹೊಡ್ದೋರುಂಟೆ? ಹೊಡ್ದೋರ್ ಸುಳೀನೆ ಒಣಗಿ ಹೋಯ್ತದೆ. ಹುಷಾರು... ಹುಷಾರು... ಎಲ್ಲಾದ್ರು ಹೊಡ್ದುಬುಟ್ಟೆಯೆ ಜೋಕೆ. ಹಾವು ಬಾವೀಲೆ ಇದ್ದದೇನಯ್ಯ?

ನಾಗಣ್ಣಾಚಾರಿ : ಇಲ್ಲ ಕಣ್ ಸ್ವಾಮಿ. ನಾನು ಭೋ ಕಷ್ಟಪಟ್ಟು ಮೇಲಕ್ಕೆ ಎತ್ತಿದೆ. ಹಾಳಾದ್ದು ಎಲ್ಲಾದ್ರೂ ದೂರ ಹೋಗೋದ್ಬುಟ್ಟು ಅಲ್ಲೆ ಚಪ್ಪಡಿ ಅಂಡಲ್ಲೇ ಹೊಕ್ಕೊಂಡದೆ. ಈಗ ಅದ ಹೊಡೀಬೇಕು ಅಂತ ಮೇಷ್ಟ್ರು; ಬ್ಯಾಡಿ ಅಂತ ನಾವು.

ತಮಡಪ್ಪ : ಪೂಜೆ ಗೀಜೆ ಮಾಡಿ ಕೈ ಮುಕ್ಕೊಂಡ್ರೇನಯ್ಯ?

ನಾಗಣ್ಣಾಚಾರಿ : ಚೆಂದಾಗೆ ಪೂಜೆ ಮಾಡ್ಬುಟ್ಟು, ಎಲ್ಲಾರ ಕಣ್ಣಿಗ್ ಕಾಣ್ದಂಗೆ ಹೊಂಟೋಗಪ್ಪ ಅಂತ ಕೈಮುಕ್ಕೊಂಡು ನಾವು ಬಂದ್ಬುಟ್ವೋ.... ಆದ್ರೆ ಈ ಮೇಷ್ಟ್ರು ಸುಮ್ನೆ ಅತ್ತಗೆ ಹೋಗೂವಲ್ರು.... ನಮ್ಮನ್ನ ಬುಡೂವಲ್ರು. ಬನ್ನಿ ಹೋಡಿಮಾ.... ಕೆಚ್ಚಮಾ ಅಂತ ಹಿಂಡ್ಕೊಂಡವ್ರೆ.

ತಮಡಪ್ಪ : ಮೇಷ್ಟ್ರೇ, ನೀವೇನೂ ಹೆದರ್ಕೋಬೇಡಿ. ಅಪ್ಪಣೆಯಿಲ್ದೇ ಹಾವು ಕಚ್ಚೋದಿಲ್ಲ ಅಂತ ಕೇಳಿದ್ದೀರೋ ಇಲ್ವೋ? ಒಂದು ಸಾರಿ ಕೈ ಮುಕ್ಕೊಂಡು ಹೊರಟ್ಹೋಗಿ. ಅದರ ಪಾಡ್ಗೆ ಅದು ಯಾವ ಕಡೆಗಾದ್ರೂ ಹೊರಟ್ಹೋಗುತ್ತೆ.

ರಾಮಚಂದ್ರ : ನೀವು ಹೀಗೆ ಹೇಳ್ತೀರ! ಆಚಾರ್ರೇನೋ ಮೂಢನಂಬಿಕೆ ಇಟ್ಕೊಂಡು ಅಂದ್ರೆ, ನೀವು ತಿಳಿದವರು ಹೀಗೆ ಹೇಳ್ಬಹುದೆ?

ತಮಡಪ್ಪ : ಇಂಥಾ ವಿಚಾರಗಳಲ್ಲಿ ನಾವು ನೀವು ತಿಳ್ಕೊಂಡದ್ದೇನು ಪ್ರಯೋಜನಕ್ಕೆ ಬರೋದಿಲ್ಲ ಮೇಷ್ಟ್ರೇ. ನಾಲ್ಕು ಜನ ಹಿಂದಿನಿಂದ ಹೆಂಗೆ ಹೇಳವ್ರೆ, ಹೆಂಗೆ ಮಾಡವ್ರೆ, ಹಂಗೆ ನಾವು ಇದ್ಬಿಟ್ರಾಯ್ತು.

ರಾಮಚಂದ್ರ : ಅಂದ್ರೆ ಕಚ್ಚೂ ಹಾವ್ನ ಕಂಡ್ರೆ ಕೈ ಮುಗೀಬೇಕು ಅಂತೀರಾ?

ನಾಗಣ್ಣಾಚಾರಿ : ಓ....ಇದೇನು ಹಿಂಗಂತೀರಿ! ನಮ್ಮ ಅಯ್ನೋರು ಪೂಜೆ ಮಾಡೋ ಗುಡೀಲಿ ಎಂಥಾ ದೊಡ್ಡ ಹಾವಯ್ತೆ ಕೇಳಿ. ಇಷ್ಟು ದಿನ ಆಗಿದೆ, ಅಯ್ನೋರಗಾಗ್ಲಿ, ಇನ್ಯಾರ್ಗಾರ ಏನಾರ ಮಾಡಿದದ್ದೇ ಕೇಳಿ?

ತಮಡಪ್ಪ : (ಬಹು ಗಾಂಭೀರ್ಯ ಹಾಗೂ ಹೆಮ್ಮೆಯಿಂದ)
ನಮ್ಮೊಳಗೆ ಭಕ್ತಿ ಚೆನ್ನಾಗಿದ್ರೆ ಅದೇನು ಮಾಡುತ್ತಯ್ಯ? ಒಟ್ಟಿನಲ್ಲಿ ನಾವು ಮಡಿವಂತರಾಗಿ ಶುದ್ಧವಾಗಿದ್ರೆ, ಅದರಿಂದ ಯಾವ ತೊಂದರೇನು ಇಲ್ಲ.

ನಾಗಣ್ಣಾಚಾರಿ : ನಮ್ಮ ಅಯ್ನೋರು ಪೂಜೆ ಮಾಡ್ಬುಟ್ಟು, ದಿನಾ ಒಂದು ಸಣ್ಣ ಚೊಂಬಲ್ಲಿ ದೇವರ ಮುಂದೆ ಇಡೂ ಹಾಲ್ನ....
(ನಾಗಣ್ಣಾಚಾರಿ ಮಾತು ಮುಗಿಸುವುದಕ್ಕೆ ಮೊದಲೇ)

ರಾಮಚಂದ್ರ : (ವ್ಯಂಗ್ಯವಾಗಿ)
ಅದೇ ಬಂದು ಆನಂದವಾಗಿ ಕುಡ್ಕೊಂಡು ಹೋಗುತ್ತೆ ಅಂತೀರಾ?

ನಾಗಣ್ಣಾಚಾರಿ : ನೋಡುದ್ರಾ ಅಯ್ನೋರೆ.... ನಾವು ಎಷ್ಟು ಹೇಳುದ್ರು.... ಒಸೀನು ನಂಬ್ಕೇನೆ ಇಲ್ವಲ್ಲ ಇವರ್ಗೆ....

(ತಿದಿಯ ಬಳಿ ಕುಳಿತು ಏನನ್ನೋ ಮಾಡುತ್ತಿದ್ದ ಈಶ್ವರನ ಕಣ್ಣಿಗೆ ಇಲಿಯೊಂದು ಅಲ್ಲಿ ಓಡಾಡುತ್ತಿರುವುದು ಕಾಣುತ್ತದೆ. ಅದನ್ನು ಹೊಡೆಯಲೆಂದು ಕೋಲನ್ನು ಹಿಡಿದು ಅಟ್ಟಾಡಿಸಿಕೊಂಡು ಈಶ್ವರ ಸುತ್ತುತ್ತಾನೆ. ಇಲಿಯು ಅವನ ಕೋಲಿನ ಪೆಟ್ಟಿಗೆ ಸಿಗದೆ, ಕಮ್ಮಾರ ಶಾಲೆಯ ಎಲ್ಲಾ ಕಡೆ ಓಡಾಡುತ್ತಿರುತ್ತದೆ. ಇಲಿಯನ್ನು ಕಂಡ ನಾಗಣ್ಣಾಚಾರಿಯು) ಹೊಡೀಲಾ.... ಹೊಡೀಲಾ ಬಡ್ಡತ್ತದ್ದ.... ಬುಡ್ಬೇಡ

ಹೊಡೀಲಾ.... ಎಂದು ಅಬ್ಬರಿಸುತ್ತಾ ನಾಗಣ್ಣಾಚಾರಿಯು ಅಲ್ಲಿದ್ದ ಕೋಲನ್ನು ಎತ್ತಿಕೊಂಡು ಹೊಡೆಯಲು ಯತ್ನಿಸುತ್ತಾರೆ. ಅಷ್ಟರಲ್ಲಿ ಇಲಿಯು ಇವರಿಬ್ಬರ ಕಣ್ಣು ತಪ್ಪಿಸಿ, ಬಿಲದೊಳಗೆ ಮರೆಯಾಗುತ್ತದೆ.)

ರಾಮಚಂದ್ರ : (ನಗುತ್ತಾ)
ಏನ್ ಆಚಾರ್‍ರೆ? ಇಲೀನಾ ಹೀಗೆ ಓಡಾಡಿಸ್ತಾ ಇದ್ದೀರಲ್ಲ!

ನಾಗಣ್ಣಾಚಾರಿ : ಹಾಳಾದವು ಏನ್ ಹೆಚ್ಚಾಗ್ಬುಟ್ಟವೆ ಅಂತೀರಿ.
(ಮತ್ತೆ ಬಂದೀತೆಂದು ನೆಲದ ಕಡೆ ನೋಡುತ್ತಾ, ಅತ್ತಿತ್ತ ಅರಸುತ್ತಲೇ ಇದ್ದಾನೆ.)

ರಾಮಚಂದ್ರ : (ವ್ಯಂಗದ ಧ್ವನಿಯಲ್ಲಿ)
ಇರ್‍ಲಿ ಬಿಡಿ ಆಚಾರ್‍ರೆ. ಅದನ್ಯಾಕೆ ಹೊಡೀತೀರಿ. ಅದರ ಪಾಡು ಅದಕ್ಕೆ, ನಿಮ್ಮ ಪಾಡು ನಿಮ್ಗೆ.

ನಾಗಣ್ಣಾಚಾರಿ : ಹಂಗನ್ನುಕಾದದ ಬುದ್ಧಿ. ಹಾಳಾದ್ದು ಇದ್ದು ಬದ್ದ ಬಟ್ಟೇನೆಲ್ಲಾ ಉತ್ರುಸಾಕ್ಬುಡ್ತು.

ರಾಮಚಂದ್ರ : ಬಟ್ಟೆ ಹರಿದೋದ್ರೆ ಏನಾಯ್ತು ಬಿಡಿ. ಹೊಸದು ತರೋದು.

ನಾಗಣ್ಣಾಚಾರಿ : ಒಳ್ಳೆ ಚೆನ್ನಾಗಿ ಹೇಳುದ್ರಿ ಸ್ವಾಮಿ.

ರಾಮಚಂದ್ರ : ಮತ್ತಿನ್ನೇನು ಆಚಾರ್‍ರೆ? ಬಟ್ಟೆ ಕತ್ರಿಸೋ ಇಲಿ ಹೊಡೀಬೇಕು ಅನ್ನು ನೀವು, ವಿಷ ತುಂಬಿರು ಹಾವು ಹೊಡೀಬಾರ್‍ದು ಅಂತೀರಲ್ಲ, ಅದು ಸರಿಯೇ?

ತಮಡಪ್ಪ : ಅದನ್ನು ಇದನ್ನು ಹೋಲಿಸುಕಾಗುತ್ತಾ ಮೇಷ್ಟ್ರೆ,

ನಾಗಸರ್ಪ ಶಿವನ ಆಭರಣವಲ್ಲವೇ?

ರಾಮಚಂದ್ರ : ಇಲಿ ಗಣೇಶನ ವಾಹನವಲ್ಲವೇ?

ತಮಡಪ್ಪ : (ಸ್ವಲ್ಪ ತಬ್ಬಿಬ್ಬಾಗಿ)
ನೀವು ಕಲ್ತಿರೋರು. ನಿಮ್ಮ ಸಂಗಡ ವಾದ ಮಾಡೋಕಾಗೊಲ್ಲ.

ರಾಮಚಂದ್ರ : ನೀವು ಹಾಗನ್ಬೇಡಿ. ಸ್ವಲ್ಪ ಯೋಚ್ನೆ ಮಾಡಿ ನೋಡಿ. ನಾನ್ಹೇಳೂದು ಸರಿಯೋ? ತಪ್ಪೋ?

ತಮಡಪ್ಪ : ಹಾಗಾದರೆ ಹಿರೀಕರೆಲ್ಲಾ ಬಹಳ ಪ್ರಾಚೀನ ಕಾಲದಿಂದಲೂ ನಾಗಪೂಜೆ ಮಾಡ್ಕೊಂಡು ಬಂದವ್ರಲ್ಲಾ ಕಾರಣವೇನು?

ರಾಮಚಂದ್ರ : ಹಾವನ್ನು ಕಂಡ್ರೆ ಇರೂ ಭಯ.

ತಮಡಪ್ಪ : ಭಯನೋ? ಏನೋ?.... ಅಂತೂ ಒಟ್ನಲ್ಲಿ ಹಿಂದ್ಲೋರೆಲ್ಲಾ ಪೂಜೆ ಮಾಡ್ತಿದ್ರು.... ಈಗ್ನೋರು ಮಾಡ್ತಾ ಇದ್ದಾರೆ. ಇದು ನಿಜವೋ? ಸುಳ್ಳೋ?

ರಾಮಚಂದ್ರ : ನಿಜ.

ತಮಡಪ್ಪ : ಸರಿ ಮಂತೆ. ನಾವ್ಯಾಕೆ ಅದನ್ನ ಪ್ರಶ್ನೆ ಮಾಡೋದು? ಹಿರಿಯೋರು ಹೆಂಗೆ ಇದ್ರೋ, ಹಂಗೇನೆ ನಾವು ಇದ್ಬುಟ್ಟು 'ಶಿವ ಅಂತ' ಒಂದಿನ ಕಂತೆ ಒಪ್ಪಿಸಿಬಿಡೋದು....

(ಹೀಗೆ ಹೇಳುತ್ತಿರುವಷ್ಟರಲ್ಲಿ ಬಿಲದಿಂದ ಮತ್ತೆ ಹೊರಬಂದ ಇಲಿಯು ತಮಡಪ್ಪನವರ ಕಾಲ ಮೇಲೆ ಹರಿದು ಮುಂದೆ ಓಡುತ್ತದೆ. ತಮಡಪ್ಪನವರು ಬಹಳ ಭೀತಿಯಿಂದ ಚಂಗೆಂದು ಮೇಲಕ್ಕೆ ನೆಗೆಯುತ್ತಾರೆ. ಇಲಿಯನ್ನು ಕಂಡ ನಾಗಣ್ಣಾಚಾರಿ ಅದನ್ನು ಅಟ್ಟಾಡಿಸಿ, ಕೊನೆಗೆ ಕೆಚ್ಚಿ ಸಾಯಿಸುತ್ತಾರೆ.)

ನಾಗಣ್ಣಾಚಾರಿ : (ಬಾಲದ ಮೂಲಕ ಅದನ್ನು ಎತ್ತಿ ಹಿಡಿದು)
ಹಾಳು ಮನೇದೆ, ಏನ್ ಕಿರುಕುಳ ಕೊಡ್ತಿದ್ದೆ ಬಾ.. ನಿನ್ನ ಕಾಗೆ ಕುಕ್ಕಿ ಕುಕ್ಕಿ ತಿನ್ನೂವಂಗೆ ಮಾಡ್ತೀನಿ....
(ಎಂದು ಹೇಳುತ್ತಾ, ಆಚೆ ಬಿಸಾಡಿ ಬರುತ್ತಾರೆ.)

ರಾಮಚಂದ್ರ : ಏನು ಆಚಾರ್ರೆ, ಪರಾಕ್ರಮ ತೋರಿಸಿಬಿಟ್ರಿ ಇಲಿ ಮೇಲೆ?
(ಇಷ್ಟೆಲ್ಲಾ ಹಗರಣದಿಂದ ತಮಡಪ್ಪನವರು ಸ್ವಲ್ಪ ತಳಮಳಗೊಳ್ಳುತ್ತಾರೆ. ಅಲ್ಲಿಂದ ಕಾಲ್ತೆಗೆಯಲು ನಿರ್ಧರಿಸಿ.)

ತಮಡಪ್ಪ : ಆಚಾರಿ, ನಾ ಬರ್ತೀನಿ. ನಾಳಾಕೆ ತಟ್ಟಿಕೊಡುವಂತೆ. ಮೇಷ್ಟ್ರೇ.... ನಾನಿನ್ನು ಬರ್ತೀನಿ.... ನಮಸ್ಕಾರ.
(ರಾಮಚಂದ್ರನು ಪ್ರತಿಯಾಗಿ ವಂದಿಸುತ್ತಾನೆ.)

ನಾಗಣ್ಣಾಚಾರಿ : ನಮ್ಮ ಮೇಷ್ಟ್ರಗೆ, ನೀವೇನು ಹೇಳ್ಳೇ ಇಲ್ವಲ್ಲಾ!

ತಮಡಪ್ಪ : ಹೇಗಾದ್ರೂ ಮಾಡ್ಕೊಳಿ. ನಿಂನಿಮ್ಮ ಹಣೇಬರಹ. ನಾನ್ಯಾಕೆ ಅದರಲ್ಲಿ ತಲೆಹಾಕಿ ಪಾಪ ಕಟ್ಕೊಳ್ಳಿ.
(ಎನ್ನುತ್ತಾ ನಿರ್ಗಮಿಸುತ್ತಾರೆ.)

ನಾಗಣ್ಣಾಚಾರಿ : (ರಾಮಚಂದ್ರನ ಕಡೆ ನೋಡುತ್ತಾ)
ಇದೇನ್ ಸ್ವಾಮಿ? ಹಾವುಂದೆ ಹುಚ್ಚಾಗ್ಹೋಯ್ತಲ್ಲ ನಿಮಗೆ!

ರಾಮಚಂದ್ರ : ನೋಡಿ ಆಚಾರ್ರೆ, ಅದನ್ನ ಹೊಡ್ಸಾಕು ತನಕ ನನಗೆ ಸ್ವಲ್ಪಾನೂ ಸಮಾಧಾನವಿಲ್ಲ.

ನಾಗಣ್ಣಾಚಾರಿ : ಒಳ್ಳೇ ಉಡ ಹಿಡ್ಕೊಂಡಂಗೆ ಹಿಡಿದ್ಬುಟ್ರಲ್ಲಾ! ಆ... ಏನು ಮಾಡೋದು ಈಗ...

(ಸ್ವಲ್ಪ ಯೋಚ್ನೆ ಮಾಡುತ್ತಿದ್ದು)

ಒಂಥರಾ ಮಾಡಿ ಸ್ವಾಮಿ. ನಿಮ್ಗೆ ಹಂಗೆ ಹೊಡಿಸಿ ಹಾಕ್ಲೇಬೇಕು ಅಂತ ಇದ್ರೆ, ಪಕ್ಕದ ಗುಡಿಸಲಲ್ಲಿ ಆ ಒಡ್ರೋನು ಅವ್ನೆ. ಅವನ್ಗೇಳಿ ಹೊಡ್ದಾಕ್ತಾನೆ.

ರಾಮಚಂದ್ರ : ಅವನು ನಿಮ್ಮಂಗೆ ಹೇಳುದ್ರೆ.

ನಾಗಣ್ಣಾಚಾರಿ : ಅವ್ಕೇನು?.... ದೇವ್ರೋ ದಿಂಡ್ರೋ.... ಒಸಿ ಏನಾರ ಕೊಡ್ತೀವಿ. ಅಂದ್ರೆ, ಏನ್ ಬೇಕಾದ್ರ ಮಾಡೋಕೆ ಸೈ. ಹೋಗಿ ಸ್ವಾಮಿ, ಕರೀರಿ ಬತ್ತನೆ.

ರಾಮಚಂದ್ರ : ಹೇಗೆ ಹೇಳ್ತೀರಿ ಆಚಾರ್ರೆ? ಒಡ್ರೋನು ದೇವರ ಪೂಜೆ ಮಾಡೋದಿಲ್ವೆ?

ನಾಗಣ್ಣಾಚಾರಿ : ಮಾಡ್ತನೆ ಪೂಜೆಯ! ಹೊಟ್ಟೆಗಿದ್ದರಲ್ವೇ ಪೂಜೆ. ನಾಲ್ಕೈದು ದಿನದಿಂದ ಕೂಲಿನಾಲಿ ಸಿಕ್ದೇ ಅವನು ಅವನ ಹೆಂಡ್ರು ಮಕ್ಳೆಲ್ಲಾ ಹಸ್ಕೊಂಡು ಹೊಂಗ್ಲೋ ಅಂತ ಬಿದ್ದವೆ. ಬೆಳಗ್ಗೆ ನನ್ತಕೆ ಬಂದಿದ್ದ, ನಾಲ್ಕಾಣೆ ಇದ್ರೆ ಕೊಡ್ರಪ್ಪ ಅಂತ. ಅವರ್ಗೆ ಯಾವ ದೇವ್ರು ಹೋಗಿ ಸ್ವಾಮಿ. ಹೊಟ್ಟೆಯೇ ದೇವ್ರು ಕಣಾ! ಒಂದು ರೂಪಾಯಿ ಕೊಡ್ತೀನಿ ಅಂತ ಕರೀರಿ, ಬತ್ತನೆ.

ರಾಮಚಂದ್ರ : (ಹೊರಡುತ್ತಾ)
ಮಾಣಿಕ್ಯ ಅಂತಲ್ವೆ ಅವನ್ಹೆಸರು?

ನಾಗಣ್ಣಾಚಾರಿ : ಹೂಕಣ, ಹೋಗಿ ಕರೀರಿ ಸ್ವಾಮಿ....
(ಎಂದು ಹೇಳುತ್ತಾ, ಮತ್ತೆ ಸುತ್ತಿಗೆಯನ್ನು ಕೈಗೆ ತೆಗೆದುಕೊಳ್ಳುತ್ತಾ, ಬಡಿಯುವ ಕಾರ್ಯದಲ್ಲಿ ಮಗ್ನನಾಗುತ್ತಾರೆ. ರಾಮಚಂದ್ರ ಸ್ವಲ್ಪ ಆಸೆಯಿಂದ ಗುಡಿಸಲ ಕಡೆಗೆ ಹೊರಡುತ್ತಾನೆ.)

ದೃಶ್ಯ-4

[ಮುರಿದು ಬಿದ್ದಿರುವ ಗುಡಿಸಲು. ಅದರ ಗರಿಗಳೆಲ್ಲಾ ಅಸ್ತವ್ಯಸ್ತಗೊಂಡಿವೆ. ಗುಡಿಸಲ ಸ್ಥಿತಿಯೇ, ಆ ಗುಡಿಸಲುವಾಸಿಗಳ ಚಿಂತಾಜನಕ ಸ್ಥಿತಿಯನ್ನು ಹೇಳುವಂತಿದೆ. ಹಸಿವಿನ ಸಂಕಟದಿಂದ ಬಳಲಿ ಬೆಂಡಾಗಿದ್ದ ಮಾಣಿಕ್ಯಂ ಗುಡಿಸಲ ಮುಂದಿನ ಗೋಡೆಯನ್ನು ಒರಗಿ ಕುಳಿತಿದ್ದಾನೆ. ಗುಡಿಸಲಿನ ಸುತ್ತಮುತ್ತ ಕೊಳಕು ತುಂಬಿದೆ. ಅಲ್ಲಿ ಬಂದ ರಾಮಚಂದ್ರ ಅಲ್ಲಿನ ಹೇಸಿಗೆಯನ್ನು ಕಂಡು ಮೂಗು ಮುಚ್ಚಿಕೊಂಡು, ಮುಂದುವರಿದು ಬರುತ್ತಾನೆ.]

ರಾಮಚಂದ್ರ : ಮಾಣಿಕ್ಯ.... ಮಾಣಿಕ್ಯ.

ಮಾಣಿಕ್ಯಂ : (ಮೆಲ್ಲನೆ ತಲೆಯೆತ್ತಿ)
ಎನ್ನ ಸಾಮಿ?

ರಾಮಚಂದ್ರ : ಒಂದ್ಕೆಲ್ಸ ಅಯ್ತೆ ಮಾಡ್ತೀಯೇನಯ್ಯ?

ಮಾಣಿಕ್ಯಂ : ಎನ್ನ ವೇಳೆ ಸಾಮಿ?

ರಾಮಚಂದ್ರ : (ಅವನು ಕುಳಿತುಕೊಂಡೇ ಮಾಡನಾಡುತ್ತಿರುವುದನ್ನು ಕಂಡು ಸ್ವಲ್ಪ ಬೇಸರಗೊಂಡ ಧ್ವನಿಯಲ್ಲಿ)
ನೀ ಮೇಲಕ್ಕೆ ಎದ್ದರಲ್ವೆ ನಾನು ಕೆಲಸ ಹೇಳೂದು.

ಮಾಣಿಕ್ಯಂ : (ಬಹಳ ಸುಸ್ತಾಗಿದ್ದುದರಿಂದ ನಿಧಾನವಾಗಿ ಮೇಲೆ ಏಳುತ್ತಾನೆ.)
ಅದೆನ್ನ ಸೊಲ್ಲು ಸಾಮಿ.

ರಾಮಚಂದ್ರ : (ಬಾವಿ ಕಡೆ ಕೈ ತೋರಿಸುತ್ತಾ)
ನೋಡಯ್ಯ, ಅಲ್ಲಯ್ತಲ್ಲ ಬಾವಿ, ಆ ಬಾವಿ ಚಪ್ಪಡಿ ಕೆಳ್ಗೆ ಒಂದು ಹಾವು ಸೇರ್‍ಕೊಂಡಯ್ತೆ. ಅದನ್ನ ಸ್ವಲ್ಪ ಹೊಡೀಬಾರಯ್ಯ.

ಮಾಣಿಕ್ಯಂ : ಪಾಂಬ! ಎನ್ನ ಪಾಂಬು ಸಾಮಿ?

ರಾಮಚಂದ್ರ : ನಾಗರಾವು.

ಮಾಣಿಕ್ಯಂ : ನಲ್ಲ ಪಾಂಬ! ಸಾಮಿ ನಾ ವರಮಾಟ್ಟೆ. ನಾ ಅಡಿಕ್ಕ ಮಾಟ್ಟೆ. ನಲ್ಲ ಪಾಂಬು ಆಂಡವನ ಸಮಾನಂ.

ರಾಮಚಂದ್ರ : (ತಾಳ್ಮೆ ತಪ್ಪಿದಂತಾಗಿ)
ನಂಗೂ ಗೊತ್ತು ಕಣಯ್ಯ. ಹಾಗಂತ ಬಿಟ್ಕೊಂಡ್ರೆ ಕಚ್ಚಿ ಸಾಯ್ಸುತ್ತಷ್ಟೆ.

(ತೀವ್ರ ಬೇಸರದಿಂದ)
ನಿಮ್ಗೇನ್ರಯ್ಯ ದೇವ್ರು ತಲೇಲಿ ಸ್ವಲ್ಪನಾದ್ರು ಬುದ್ಧೀನೆ ಕೊಡಲಿಲ್ವ.

ಮಾಣಿಕ್ಯಂ : ಸಾಮಿ, ನೀ ಎನ್ನ ಸೊನ್ನಾಲು ಸೊಲ್ಲು, ನಾ ವರಮಾಟ್ಟೆ, ನಾ ಅಡಿಕ್ಕಮಾಟ್ಟೆ.

ರಾಮಚಂದ್ರ : ಲೋ ಮಾಣಿಕ್ಯಂ, ನನ್ನ ಮಾತು ಕೇಳೋ ಇಲ್ಲಿ. ನೀ ಹೊಡಿ ಬಾ. ನಿಂಗೆ ಅದೇನ್ ಕೊಡ್ಬೇಕೋ ಕೊಡ್ತೀನಿ.

ಮಾಣಿಕ್ಯಂ : ನೀ ಎನ್ನ ಕುಡುತ್ತಾಲು ಎನಕ್ಕು ವೇಂಡಾ ಸಾಮಿ.

ರಾಮಚಂದ್ರ : ಏನಯ್ಯ ಹೀಗಂತೀಯ? ನಾಲ್ಕೈದು ದಿನದಿಂದ ಕೂಲಿ ಸಿಕ್ಕದೇ ಒದ್ದಾಡ್ತಿದ್ದೀಯಂತೆ. ನಾನೇನಾದ್ರು ಸ್ವಲ್ಪ ಕೊಟ್ರೆ ಒಂದ್ಹೊತ್ತಿನ ತಾಪತ್ರಯ ಕಳೀಯಲ್ವೆ.

ಮಾಣಿಕ್ಯಂ : ನಲ್ಲ ಪಾಂಬು ಅಡಿಕ್ಕಿರಿದ ಸಾಮಿ. ಆಂಡವ... ಅವ ಎಂಗಪ್ಪ...ನಾ ಅಡಿಕ್ಕ ಮಾಟ್ಟೆ, ನೀ ಎನ್ನ ಪಣ್ಣಾಲು ನಾ ಅಡಿಕ್ಕಿರಿದಿಲ್ಲೆ ಸಾಮಿ.

ರಾಮಚಂದ್ರ : ನೋಡಯ್ಯ ಮಾಣಿಕ್ಯ, ನೀ ಅದ್ನೆಲ್ಲಾ ಹೇಳ್ತಾ ಕುಂತ್ಕೊಳ್ಬೇಡ. ಒಂದು ರೂಪಾಯಿ ಕೊಡ್ತೀನಿ, ಹೊಡೀ ಬಾ.

(ಇದೇ ಸಮಯಕ್ಕೆ ಸರಿಯಾಗಿ ಗುಡಿಸಲ ಒಳಗಿಂದ ಮಾಣಿಕ್ಯನ ಮಕ್ಕಳ ರೋದನ ಕೇಳಿ ಬರುತ್ತದೆ. ಹಸಿವಿನಿಂದ ಕಂಗಾಲಾಗಿದ್ದ ಮಕ್ಕಳು ತಾಯಿಯನ್ನು ಕಾಡುತ್ತಿವೆ. ನಿಸ್ಸಹಾಯಕಳಾಗಿದ್ದ ಮಾಣಿಕ್ಯನ ಹೆಂಡತಿ, ಮಾಣಿಕ್ಯನನ್ನು ಮತ್ತು ತನ್ನ ದುರಾದೃಷ್ಟವನ್ನು ಕುರಿತು ಏನೇನೋ ಬಯ್ದುಕೊಂಡು ಮಕ್ಕಳನ್ನು ಹೊಡೆಯುತ್ತಿದ್ದಾಳೆ. ಮಕ್ಕಳ ಅಳುವ ಧ್ವನಿ ಇಮ್ಮಡಿಗೊಳ್ಳುತ್ತದೆ. ತನ್ನ ಮಕ್ಕಳು ಹಸಿವಿನ ಸಂಕಟದಲ್ಲಿ ಬೇಯುತ್ತಾ "ಅಮ್ಮಾ ಪಸಿಕ್ಕಿರುದು.... ಅಮ್ಮಾ

ಪಸಿಕ್ಕಿರುದು.... ಅಮ್ಮಾ ಅಮ್ಮಾ" ಎಂದು ಅಳುತ್ತಿರುವ ಆಕ್ರಂದನ ಧ್ವನಿ ಮಾಣಿಕ್ಯನ ಎದೆಯನ್ನು ಇರಿದಂತಾಗುತ್ತದೆ. ಇದೇ ಸಮಯದಲ್ಲಿ ರಾಮಚಂದ್ರ ಹಣದಾಸೆಯನ್ನು ಮತ್ತೆ ಅವನ ಮುಂದೊಡ್ಡುತ್ತಾನೆ.)

ನೋಡು ಮಾಣಿಕ್ಯ, ಇನ್ನು ಒಂದು ರೂಪಾಯಿ ಹೆಚ್ಚಾಗಿ ಕೊಡ್ತೀನಿ, ಬಾರಯ್ಯ ಹೊಡಿ ಬಾ.

(ಮತ್ತೆ ಮಕ್ಕಳ ಅಳುವ ಧ್ವನಿ ಇಡೀ ರಂಗಮಂಟಪದ ತುಂಬಾ ಅನುರಣಿಸುತ್ತದೆ. ರಾಮಚಂದ್ರನ ಹಣದ ಆಮಿಷದ ಮಾತುಗಳು, ಅದಕ್ಕೆ ಸರಿಸಮಾನವಾಗಿ ಎಲ್ಲೆಡೆಯಲ್ಲೂ ಪ್ರತಿಧ್ವನಿಸುತ್ತದೆ. ಕೆಲವು ಕ್ಷಣಗಳ ಕಾಲ ಮಾಣಿಕ್ಯ ತೀವ್ರವಾದ ಮಾನಸಿಕ ತುಮುಲಕ್ಕೆ ಸಿಲುಕುತ್ತಾನೆ. ಅಸಹನೀಯವಾದ ವೇದನೆ ಆತನ ಮುಖದಿಂದ ಹೊರಹೊಮ್ಮುತ್ತಿದೆ. ಒಂದೆರಡು ಕ್ಷಣಗಳ ನಂತರ, ಮಾಣಿಕ್ಯ ತನ್ನಲ್ಲಿಯೇ ಏನನ್ನೋ ನಿರ್ಧರಿಸುತ್ತಾನೆ.)

ಮಾಣಿಕ್ಯಂ : ನೋಡು ಸ್ವಾಮಿ, ನೀ ಎವ್ವಳ ಕುಡುಕ್ಕಿರೆ?

ರಾಮಚಂದ್ರ : ಎರಡು ರೂಪಾಯಿ.

ಮಾಣಿಕ್ಯಂ : (ತಲೆಯನ್ನು ಅಲ್ಲಾಡಿಸುತ್ತ)....
ಆವುರುದಿಲ್ಲೆ ಸಾಮಿ.

ರಾಮಚಂದ್ರ : ಇನ್ನೆಷ್ಟು ಕೊಡ್ಬೇಕಯ್ಯ?

ಮಾಣಿಕ್ಯಂ : ಪತ್ತು ರೂಪಾಯಿ.

ರಾಮಚಂದ್ರ : (ಅಚ್ಚರಿ ಹಾಗೂ ಕೋಪದಿಂದ)
ಎಲ್ಲಾದ್ರೂ ಹೋಗಿ ಪುಕ್ಸಟ್ಟೆ ಗಂಟು ಸಿಕ್ಕುದ್ರೆ, ಹೊಡ್ದು ಬಿಡ್ರಯ್ಯ! ಹತ್ತು ರೂಪಾಯಿ ಕೊಡ್ಬೇಕಾ. ಏನಯ್ಯ ಧರ್ಮ ಕರ್ಮ ಅಂತ ಸ್ವಲ್ಪಾನು ಇಲ್ವೇನಯ್ಯ?

ಮಾಣಿಕ್ಯಂ : ಪಣತ್ತಕ್ಕಾಗಿ ಪಾಂಬು ಅಡಿಕ್ಕಿರುದು ಧರ್ಮಮಾ ಸಾಮಿ?

ರಾಮಚಂದ್ರ : ಹತ್ತಾರು ಮಂದಿ ತಿರ್ಗಾಡೋ ಜಾಗ್ದಲ್ಲಿ ಸೇರ್ಕೊಂಡಿರೋ ಹಾವು ಹೊಡುದ್ರೆ ಪುಣ್ಯ ಬರೋದಿಲ್ವೇನಯ್ಯ?

ಮಾಣಿಕ್ಯಂ : ಪುಣ್ಯಮಾ! ಎನಕ್ಕು ವೇಂಡಾ ಸಾಮಿ.

ರಾಮಚಂದ್ರ : (ಮತ್ತೇನನ್ನು ಹೇಳಲು ತೋಚದೆ)
ಏನೋ ನೋಡಯ್ಯ, ಎಲ್ಲಾ ನಿಂಗೆ ಬಿಟ್ಟಿದ್ದೆ.

ಮಾಣಿಕ್ಯಂ : ಪತ್ತು ರೂಪಾಯಿ ಕುಡುತ್ತಾ ನಾ ವರ್‍ರೆ. ಇಲ್ಲೆನಾ ಇಲ್ಲೆ.

ರಾಮಚಂದ್ರ : ಎಂಥಾ ಕಠಿಣ ಮನಸಯ್ಯ ನಿಂದು.

ಮಾಣಿಕ್ಯಂ : ಎನ್ನ ಸಾಮಿ? ನಾಲು ನಾಳ ಎನಕ್ಕು-ಎನ್ನ ಮಕ್ಕಳಕ್ಕು ಸೋರು ಇಲ್ಲೆ. ಎಮಕ್ಕು ಯಾರು ಕುಡುಕ್ಕುರಾಂಗು? ನೀಂಗೆ ಕುಡುಕ್ಕಿರಿಂಗಳಾ?

ರಾಮಚಂದ್ರ : ನೋಡಯ್ಯ ಅದೆಲ್ಲಾ ತಲೆಹರಟೆ ಬ್ಯಾಡ. ಐದು ರೂಪಾಯಿ ಕೊಡ್ತೀನಿ. ಬರ್ತೀಯ?

ಮಾಣಿಕ್ಯಂ : ಇಲ್ಲೆ ಸಾಮಿ.

ರಾಮಚಂದ್ರ : ಕೊನೆ ಮಾತು. ಏಳು ರೂಪಾಯಿ ಕೊಡ್ತೀನಿ.

ಮಾಣಿಕ್ಯಂ : ಪತ್ತು ರೂಪಾಯಿಕ್ಕಿ ಒರೂ ಪೈಸೆ ಕಮ್ಮಿಯಿರಂದ ನಾ ವರಮಾಟ್ಟೆ ಸಾಮಿ.

ರಾಮಚಂದ್ರ : (ಒಳಗೊಳಗೆ ಬಹಳ ಕೋಪದಿಂದ ಕುದಿಯುತ್ತಾ, ಒಂದು ಕ್ಷಣ ಆಲೋಚಿಸಿ, ಕೊನೆಗೆ ಅನ್ಯ ಮಾರ್ಗವಿಲ್ಲದೆ ಒಪ್ಪಿಕೊಳ್ಳುತ್ತಾನೆ.)
ಹತ್ತು ರೂಪಾಯ್ನೆ ಕೊಡ್ತೀನಿ ಬಾರಯ್ಯ, ಹೊಡೀ ಬಾ.

ಮಾಣಿಕ್ಯಂ : ನೀ ಮಿನ್ನೆ ಪೋ ಸಾಮಿ. ಪಿನ್ನಾಲೆ ಗಡಪ್ಪಾರೆ ಎಡತ್ತುಟ್ಟು ಒರ್‍ರೆ.
(ಎಂದು ಗುಡಿಸಲ ಒಳಕ್ಕೆ ಹೋಗುತ್ತಾನೆ. ರಾಮಚಂದ್ರ ಬಾವಿಯ ಕಡೆಗೆ ತೆರಳುತ್ತಾನೆ.)

ದೃಶ್ಯ-5

[ಬಾವಿಯ ಬಳಿ ಕಮಲ ನಿಂತಿದ್ದಾಳೆ. ರಾಮಚಂದ್ರ ಒಬ್ಬನೇ ಬರುತ್ತಿದ್ದುದನ್ನು ನೋಡಿ]

ಕಮಲ : ಏನ್ರಿ? ಆಚಾರ್ರು ಎಲ್ಲಿ? ನೀವೊಬ್ರೆ ಬರ್ತಾ ಇದ್ದೀರಿ!

ರಾಮಚಂದ್ರ : ಆ ಪಾಪಿ ಎಲ್ಲಿ ಬರ್ತಾನೆ?

ಕಮಲ : ಹಾಗಾದ್ರೆ ನೀವೇ ಹೋಡೀತೀರಾ?

ರಾಮಚಂದ್ರ : ಲೇ ನಿನ್ನ ಮಾತಿಗೆ ಸ್ವಲ್ಪ ಬ್ರೇಕ್ ಹಾಕ್ತಿಯೇನೆ?

ಕಮಲ : ಈಗ ಇನ್ಯಾರ್ರಿ ಹಾವು ಹೊಡೀತಾರೆ?

ರಾಮಚಂದ್ರ : ಆ ಗುಡಿಸಲಲ್ಲಿ ಇದ್ದಾನಲ್ಲ ಮಾಣಿಕ್ಯ, ಅವನು ಬರ್ತಾನೆ.

ಕಮಲ : ಅವನು ಹೊಡಿಯೋಕೆ ಒಪ್ಗೊಂಡ್ನ?

ರಾಮಚಂದ್ರ : ಅವನು ಒಪ್ಕೊಳ್ಳಲಿಲ್ಲ .

ಕಮಲ : (ಅಚ್ಚರಿಯಿಂದ)
ಮತ್ತೆ....

(ಕಮಲಳ ಮಾತಿಗೆ ರಾಮಚಂದ್ರ ಉತ್ತರ ಕೊಡುವಷ್ಟರಲ್ಲಿ, ಹಾರೆಯನ್ನು ಕೈಯಲ್ಲಿ ಹಿಡಿದು ಮಾಣಿಕ್ಯ ಅಲ್ಲಿಗೆ ಬರುತ್ತಾನೆ.)

ಮಾಣಿಕ್ಯಂ : ಎಂಗೆ ಸಾಮಿ? ಎಂಗಿರಿಕ್ಕುದು?

ರಾಮಚಂದ್ರ : (ಬಾವಿಯ ಚಪ್ಪಡಿಯ ಕಡೆಗೆ ಕೈ ತೋರಿಸುತ್ತಾ)
ಅಲ್ನೋಡಯ್ಯ ಆ ಚಪ್ಪಡಿ ಕೆಳಗಿದೆ. ಚಪ್ಪಡಿ ಸ್ವಲ್ಪ ಜರುಕಿಸು, ಕಾಣ್ತದೆ....

(ಮಾಣಿಕ್ಯ ಚಪ್ಪಡಿಯ ಹತ್ತಿರಕ್ಕೆ ಹೋಗಿ, ಸ್ವಲ್ಪ ಎಚ್ಚರಿಕೆಯಿಂದ ಅದನ್ನು ಹಾರೆಯಿಂದ ಮೀಟುತ್ತಾನೆ. ಇತ್ತ ರಾಮಚಂದ್ರ ಕಮಲಳ ತೋಳನ್ನು ಹಿಡಿದೆಳೆಯುತ್ತಾ ಚಪ್ಪಡಿಯಿಂದ ಆದಷ್ಟು ದೂರ ಹೋಗಿ ನಿಂತು, ಅಲ್ಲಿಂದಲೇ ಮಾಣಿಕ್ಯನಿಗೆ ಸೂಚನೆ ನೀಡುತ್ತಾನೆ.)

ಈ ಕಡೆಯಿಂದ ಹಾಕಯ್ಯ ಹಾರೆನಾ.... ಸರಿಯಾಗಿ ಮೀಟು.... ಛೇ.... ಛೇ.... ಆ ಚಪ್ಪಡಿಯಲ್ಲ ಕಣಯ್ಯ. ಈ ಕಡೆಯಿದೆಯಲ್ಲ ಅದು.

(ಮಾಣಿಕ್ಯಂ ಈತನ ಸೂಚನೆಗೆ ತಕ್ಕಂತೆ, ಮತ್ತೊಂದು ಚಪ್ಪಡಿಯನ್ನು ಸ್ವಲ್ಪ ಸರಿಸುತ್ತಿದ್ದಾನೆ.)

ಹುಷಾರು ಕಣಯ್ಯ... ಸ್ವಲ್ಪ ಹಿಂದಕ್ಕೆ ನಿಂತ್ಕೊ.... ಹಾ.... ಹಾ.... ಆ ಚಪ್ಪಡಿ ಕೆಳಗೇನೆ ಇರೋದು.

(ಮಾಣಿಕ್ಯಂ ನಾಲ್ಕೈದು ಬಾರಿ ಹಾರೆಯಿಂದ ಮೀಟಿ, ಆ ಚಪ್ಪಡಿಯನ್ನು ಸ್ವಲ್ಪ ಎತ್ತಿ, ಬಗ್ಗಿ ನೋಡಿದಾಗ ಸಂದಿಯಲ್ಲಿ ಹಾವು ಮುದುಡಿಕೊಂಡು ಅಡಗಿರುವುದು ಮಾಣಿಕ್ಯನಿಗೆ ಕಾಣುತ್ತದೆ. ರಾಮಚಂದ್ರನ ಕಡೆ ತಿರುಗಿ, ಹಾವು ಅಲ್ಲಿದೆಯೆಂಬುದನ್ನು ಮಾಣಿಕ್ಯನು ತನ್ನ ಕೈ ಮತ್ತು ತಲೆ ಅಲ್ಲಾಡಿಸುವುದರ ಮೂಲಕ ಸೂಚಿಸಿ, ಅದನ್ನು ಹೇಗೆ ಕೊಲ್ಲಬೇಕೆಂಬ ಹಂಚಿಕೆಯಲ್ಲೇ ಮತ್ತೆ ಮಗ್ನನಾಗುತ್ತಾನೆ.)

ಮಾಣಿಕ್ಯ... ಚೆನ್ನಾಗಿ ತಲೆ ಜಜ್ಜಿ ಬಿಡಯ್ಯ. ಅದೆಲ್ಲಾದ್ರು ಅರ್ಧ ಜೀವ ಆಗಿ ಉಳ್ಕೊಂಡ್ರೆ, ಹೊಡ್ದೋರ್ನ ಬಿಡಲ್ವಂತೆ!

ಕಮಲ : ಹೊಡೀ ಅಂತ ಹೇಳ್ದೋರ್ನು ಬಿಡಲ್ವಂತೆ !

ರಾಮಚಂದ್ರ : ಲೇ ಸಾಕು ಸುಮ್ನಿರೆ, ನಡೀಯೆ ಒಳಕ್ಕೆ...

(ತೀವ್ರವಾದ ಸಿಟ್ಟಿನಿಂದ ಅವಳನ್ನು ನೋಡುತ್ತಾನೆ. ಅವನ ಕೋಪವನ್ನು ಕಂಡ ಕಮಲ ನಗುತ್ತಾ ಒಳಕ್ಕೆ ಹೋಗುತ್ತಾಳೆ. ರಾಮಚಂದ್ರ ಮತ್ತೆ ಮಾಣಿಕ್ಯನ ಕಡೆ ತಿರುಗಿ)

ಮಾಣಿಕ್ಯ, ಸರಿಯಾಗಿ ಹೊಡಿಯಯ್ಯ.

(ಎಂದು ಎಚ್ಚರಿಕೆ ನೀಡುತ್ತಾ ಬಹುದೂರ ನಿಲ್ಲುತ್ತಾನೆ. ಇತ್ತ ಚಪ್ಪಡಿಯನ್ನು ಜರುಗಿಸಿ ನೋಡುತ್ತಿದ್ದ ಮಾಣಿಕ್ಯ, ಏಕೋ? ಏನೋ? ಸ್ವಲ್ಪ ಹಿಂದಕ್ಕೆ ಸರಿಯುತ್ತಾನೆ. ಪುನಃ ಮಾನಸಿಕ ದ್ವಂದ್ವಕ್ಕೆ ಒಳಗಾಗುತ್ತಾನೆ. ಮತ್ತೆ ಮಕ್ಕಳ

ರೋದನವೊಂದು ಕಡೆ ಮತ್ತು ರಾಮಚಂದ್ರ ಆಡಿದ ಹಣದ ಪ್ರಲೋಭನೆಯ ನುಡಿಗಳೊಂದು ಕಡೆ, ಇಡೀ ರಂಗಮಂಟಪದಲ್ಲೆಲ್ಲಾ ಅನುರಣಿಸುತ್ತವೆ. ಆ ಶಬ್ದ ಒಮ್ಮೆ ಹೆಚ್ಚಾಗಿ, ಮತ್ತೆ ಅತಿ ನಿಧಾನವಾಗಿ ಕಡಿಮೆಯಾಗುತ್ತಿದ್ದಂತೆಯೇ, ಮಾಣಿಕ್ಯ ಒಂದು ನಿರ್ಧಾರಕ್ಕೆ ಬರುತ್ತಾನೆ. ಈಗ ಶಬ್ದ ಸಂಪೂರ್ಣವಾಗಿ ನಿಲ್ಲುತ್ತದೆ. ಮಾಣಿಕ್ಯ ಚಪ್ಪಡಿಯಿಂದ ಮತ್ತಷ್ಟು ದೂರ ಸರಿದು, ತನ್ನ ಕೈಯಲ್ಲಿದ್ದ ಹಾರೆಯನ್ನು ಕೆಳಗಿಟ್ಟು, ಹಾವು ಅಡಗಿದ್ದ ಚಪ್ಪಡಿಯ ಕಡೆ ನೋಡುತ್ತಾ. ಕೈ ಮುಗಿದು, ಅಡ್ಡ ಬೀಳುತ್ತಾನೆ. ಮತ್ತೆ ಎದ್ದು ಹಾರೆಯನ್ನು ತೆಗೆದುಕೊಂಡು, ಚಪ್ಪಡಿಯ ಬಳಿಗೆ ಬಂದು, ಅದನ್ನು ಮೀಟಿ ತಳ್ಳಿ ಹೊರಕ್ಕೆ ಬಂದ ಹಾವನ್ನು ಕೆಚ್ಚಿ ಬಡಿದು ಕೊಲ್ಲುತ್ತಾನೆ. ಇದನ್ನು ಕಂಡು ಸಮಾಧಾನಗೊಂಡ ರಾಮಚಂದ್ರ ಹಣವನ್ನು ತರಲು ಒಳಕ್ಕೆ ಹೋಗುತ್ತಾನೆ. ತಾನು ಹೊಡೆದು ಕೊಂದ ಹಾವನ್ನು ಹಾರೆಯಿಂದ ಮೇಲಕ್ಕೆತ್ತಿ ಹಿಡಿದ ಮಾಣಿಕ್ಯ ಅದರ ಸಮೇತ ರಂಗದ ಮುಂದೆ ಬರುತ್ತಾನೆ. ಅವನ ಮುಖದಲ್ಲಿ ಒಂದು ಬಗೆಯ ಉದ್ವೇಗ, ತಳಮಳ, ನೋವು ತುಂಬಿದೆ. ರಾಮಚಂದ್ರ ಹೋದ ಕಡೆಗೆ ನೋಡುತ್ತಾ ನಿಲ್ಲುತ್ತಾನೆ.]

(ತೆರೆ ಸರಿಯುತ್ತದೆ.)

❍

ಬರಹಗಾರ

ಹೆಸರು	:	ಸಿ.ಪಿ. ನಾಗರಾಜ
ತಾಯಿ	:	ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.
ತಂದೆ	:	ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
ಓದು	:	ಎಂ.ಎ., ಪಿಎಚ್.ಡಿ.
ಕೆಲಸ	:	ಕನ್ನಡ ಉಪನ್ಯಾಸಕ 1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ. 1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.
ನಾಟಕ	:	ಭಾಗೀರಥಿ ಹಾವು ಒಂದು ರೂಪಾಯಿ ಹೆಣದ ಹಣ ಅಂಬೆ ಅಂಗಿ ಬಟ್ಟೆ ಕಳ್ಳರಿದ್ದಾರೆ... ಎಚ್ಚರಿಕೆ
ಗದ್ಯ	:	ಹಳ್ಳಿಗಾಡಿನ ರೂವಾರಿ ಡಾ.ಬಂದೀಗೌಡ ಆಣೆ ಪ್ರಮಾಣಗಳು ಬಯ್ಗುಳ ಸರ್ವಜ್ಞ ವಚನಗಳ ಓದು ಅಲ್ಲಮ ವಚನಗಳ ಓದು ಶಿವಶರಣಶರಣೆಯರ ವಚನಗಳ ಓದು ಶಿವಶರಣರ ವಚನಗಳ ಓದು ಬಸವಣ್ಣ ವಚನಗಳ ಓದು ಮುದ್ದೆಗಂಟು
ವಿಳಾಸ	:	ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521. ngy7777@gmail.com